ವೀರಬ್ರಹ್ಮಯ್ಯ

ಡಾ: ಶೇಷಶಾಸ್ತ್ರಿ



ಕರ್ನಾಟಕ ಸಾಹಿತ್ಯ ಅಕಾಡೆಮಿ

ಸಾಮಾಜಿಕ ಚಿಂತನಮಾಲೆ

ವೀರಬ್ರಹ್ಮಯ್ಯ

ಡಾ. ಶೇಷಶಾಸ್ತ್ರಿ

ಕರ್ನಾಟಕ ಸಾಹಿತ್ಯ ಅಕಾಡೆಮಿ
ನೃಪತುಂಗ ರಸ್ತೆ, ಬೆಂಗಳೂರು–೫೬೦ ೦೦೨

VEERABRAMAIAH—Written by Dr. Sheshashastri and Published by Karnataka Sahitya Akademy, Nrupatunga Road, Bangalore-560002.

First Publication 1994 Pages : viii+40

ಮೊದಲನೇ ಮುದ್ರಣ ೧೯೯೪

ಪ್ರಧಾನ ಸಂಪಾದಕರು :

ಬರಗೂರು ರಾಮಚಂದ್ರಪ್ಪ
ಅಧ್ಯಕ್ಷರು
ಕರ್ನಾಟಕ ಸಾಹಿತ್ಯ ಅಕಾಡೆಮಿ

ಪ್ರಕಾಶಕರು :

ರಿಜಸ್ಟ್ರಾರ್
ಕರ್ನಾಟಕ ಸಾಹಿತ್ಯ ಅಕಾಡೆಮಿ

ರಕ್ಷಾಪುಟ ವಿನ್ಯಾಸ :

ಸಿ. ಚಂದ್ರಶೇಖರ್

ಬೆಲೆ : ಎರಡು ರೂಪಾಯಿ

ಮುದ್ರಕರು :

ರಶ್ಮಿ ಮುದ್ರಣ
ನಂ. ೧೯, ೫ನೇ ಕ್ರಾಸ್, ಸುಧಾಮನಗರ, ಬೆಂಗಳೂರು--೫೬೦ ೦೨೭

ಅಧ್ಯಕ್ಷರ ಮಾತು

ಸಮಾಜದಲ್ಲಿ ಸಮಾನತೆ, ಸಾಮರಸ್ಯಗಳು ನೆಲೆಯೂರಬೇಕೆಂಬ ಆಶಯಕ್ಕೆ ಒಂದು ಇತಿಹಾಸವಿದೆ. ವಿವಿಧ ಕಾಲಘಟ್ಟಗಳಲ್ಲಿ ಬದುಕನ್ನು ಅಂತಃಕರಣಪೂರ್ವಕವಾಗಿ ಪ್ರೀತಿಸಿದ ಚೇತನಗಳು, ಆರೋಗ್ಯಕರ ಚಲನಶೀಲತೆಗೆ ಒತ್ತಾಸೆಯಾಗಿವೆ. ಇದು ಹೊಸ ಬೆಳಕನ್ನು ಹುಡುಕುವ ಒಂದು ಹೋರಾಟ; ಅಂತೆಯೇ ಇರುವ ಬೆಳಕನ್ನು ಕಾಯ್ದುಕೊಳ್ಳುವ ವಿಶಿಷ್ಟ ಕಾಳಜಿ. ಅದೇ ಸಂದರ್ಭದಲ್ಲಿ ಹಗಲಲ್ಲೇ ಕತ್ತಲು ಮೂಡಿಸುವ ಕರಾಳ ಪ್ರಯತ್ನಗಳಿಗೇನೂ ಕಡಿಮೆಯಿಲ್ಲ. ಬೆಳಕಿನ ಕಿರಣಗಳನ್ನು ಕತ್ತಲ ಕೋಣೆಯಲ್ಲಿ ಕೂಡಿ ಹಾಕುವ ಇಂಥ ಸ್ವಾರ್ಥ ಶಕ್ತಿಗಳಿಗೂ, ಚಲನಶೀಲಪರವಾದ ಚೇತನಗಳಿಗೂ ಮುಖಾಮುಖಿ ಅನಿವಾರ್ಯ. ವ್ಯಕ್ತಿ ಮತ್ತು ಸಂದರ್ಭಗಳಿಗನುಗುಣವಾಗಿ ಮುಖಾಮುಖಿಯ ಸ್ವರೂಪದಲ್ಲಿ ವ್ಯತ್ಯಾಸಗಳಿರಬಹುದು; ಕಾರ್ಯಕ್ಷೇತ್ರಗಳಲ್ಲಿ ವಿಭಿನ್ನತೆಯಿರಬಹುದು. ಆದರೆ ಆಯಾ ನೆಲೆಯಲ್ಲಿ ಜಡತೆಯನ್ನು ಮೀರುವ ಮನೋಧರ್ಮ ಮುಖ್ಯವಾಗುವ ಮುಖಾಮುಖಿಯು ಮಹತ್ವದ್ದೇ ಆಗಿರುತ್ತದೆ.

ಸಾಮಾಜಿಕ ಸನ್ನಿವೇಶವೊಂದು ಉಂಟುಮಾಡುವ ಸೈದ್ಧಾಂತಿಕ ಮುಖಾಮುಖಿ ಮತ್ತು ಅದರ ಫಲಿತಗಳು ಇದ್ದಕ್ಕಿದ್ದಂತೆ ಸಂಭವಿಸುವುದಿಲ್ಲ. ಇದಕ್ಕೂ ಒಂದು ಚರಿತ್ರೆಯಿರುತ್ತದೆ. ಆದ್ದರಿಂದ ಚಾರಿತ್ರಿಕತೆಯನ್ನು ಪರಿಗಣಿಸಿಯೇ ನಾವು ಸಾಮಾಜಿಕ ಚಿಂತನೆಯನ್ನು ಪರಿಶೀಲಿಸುವುದು ಆರೋಗ್ಯಕರವಾದುದು. ನಿರ್ದಿಷ್ಟ ಕಾಲದ ಚಲನಶೀಲ ಚಿಂತನೆ ಸಮಕಾಲೀನ ಸಂದರ್ಭದಲ್ಲಿ ಹಳೆಯದಾಗಬಹುದಾದರೂ,

ಸಮಕಾಲೀನ ಸಂದರ್ಭದ ಹೊಸ ಚಿಂತನೆಗಳಿಗೆ ಚಾರಿತ್ರಿಕ ಒತ್ತಾಸೆಯನ್ನೂ, ಪ್ರಗತಿಪರ ಪರಂಪರೆಯನ್ನೂ ಅದು ಒದಗಿಸಿರುತ್ತದೆಯೆಂಬುದನ್ನು ನಾವು ಮರೆಯಲಾಗದು. ಆಯಾ ಚಾರಿತ್ರಿಕ ಸಂದರ್ಭವನ್ನು ಪರಿಗಣಿಸಿಯೇ ಸಮಕಾಲೀನ ವಿವೇಕದ ಮೂಲಕ ಎಲ್ಲ ಕಾಗದ ಚಿಂತನೆಗಳನ್ನು ತೂಗಿ ನೋಡುವುದರಿಂದ ಆತುರದ, ಅತಿರೇಕದ ತೀರ್ಪುಗಳಿಂದ ನಾವು ಪಾರಾಗುತ್ತೇವೆ. ಸರಿದಾರಿಯಲ್ಲಿ ಹೆಜ್ಜೆಯಿಡುತ್ತೇವೆ. ಆಯಾ ಕಾಲದ ಸಾಮಾಜಿಕ ಚಿಂತನೆಗಳ ಚಲನಶೀಲತೆಯನ್ನು ಮೆಚ್ಚುತ್ತ, ಮಿತಿಗಳನ್ನು ಗುರುತಿಸಿ ಮೀರುತ್ತಾ, ಹೊಸ ಮನೋಧರ್ಮವನ್ನು ರೂಪಿಸಿಕೊಳ್ಳುವುದು, ಚಿಂತನೆಗೆ ಹೊಸ ಆಯಾಮಗಳನ್ನು ಕಂಡುಕೊಳ್ಳುವುದು ಸಮಕಾಲೀನತೆಯ ಸತ್ವವಾಗಬಲ್ಲದು.

ಒಟ್ಟು ವಿಶ್ವದಲ್ಲಿ ಭಕ್ತರು, ಸಂತರು, ಸಮಾಜ ಸೇವಕರು, ರಾಜಕಾರಣಿಗಳು, ವಿಜ್ಞಾನಿಗಳು, ಕವಿ–ಕಲಾವಿದರು, ಕ್ರಾಂತಿಕಾರಿಗಳು –ಹೀಗೆ ವಿವಿಧ ನೆಲೆಗಳಲ್ಲಿ ಬದುಕನ್ನು ಕಂಡುಕೊಳ್ಳುವ ಮತ್ತು ಕಟ್ಟುವ ಕ್ರಿಯಾಶೀಲತೆ ತೋರಿದವರೆಲ್ಲರೂ ಒಂದಲ್ಲ ಒಂದು ರೀತಿಯಲ್ಲಿ ಸಾಮಾಜಿಕ ಚಿಂತಕರೇ ಆಗಿದ್ದಾರೆ. ಇವರ ನಂಬಿಕೆ, ನಿಲುವು ಮತ್ತು ಮಾರ್ಗಗಳು ಬೇರೆ ಬೇರೆಯಿರಬಹುದು. ಆದರೆ ತಂತಮ್ಮ ಕಾರ್ಯಕ್ಷೇತ್ರದ ಚೌಕಟ್ಟಿನಲ್ಲಿ ಯಥಾಸ್ಥಿತಿಯನ್ನು ಮೀರುತ್ತ, ಮುಂದೆ ಜಡ ಚೌಕಟ್ಟುಗಳನ್ನು ಛಿದ್ರಮಾಡಿ ಹೊಸ ಹಾದಿ ಹುಡುಕುವುದಕ್ಕೆ, ಹೊಸ ಚಿತ್ರ ಬರೆದು ಹೊಸ ಚೌಕಟ್ಟು ನಿರ್ಮಿಸುವುದಕ್ಕೆ ಪ್ರೇರಣೆಯಾಗಿರುವುದಂತೂ ನಿಜ. ಪರಸ್ಪರ ವಿರುದ್ಧ ನೆಲೆಗಳಿಗೆ ಸೇರಿದ ಇವರು ತಮ್ಮೆಲ್ಲ ಮಿತಿ ಮತ್ತು ವ್ಯಾಪ್ತಿಯೊಂದಿಗೆ ಚಾರಿತ್ರಿಕ ಮಹತ್ವ ಪಡೆಯುತ್ತಾರೆ. ಯಾಕೆಂದರೆ ಸಾಮಾಜಿಕ ಚಿಂತಕರು ಯಾವುದೇ ಕ್ಷೇತ್ರಕ್ಕೆ ಸಂಬಂಧಿಸಿರಲಿ, ಯಾವುದೇ ಸೈದ್ಧಾಂತಿಕ ಸ್ವರೂಪವನ್ನು ಹೊಂದಿರಲಿ, ಅವರವರ ಸಂದರ್ಭದಲ್ಲಿ ಮೂಲಭೂತವಾದಿ ಮನೋಧರ್ಮವನ್ನು ಪಡೆದಿರುವುದಿಲ್ಲ ; ಜಡಜೈಲುಗಳನ್ನು ನಿರ್ಮಿಸುವುದಿಲ್ಲ ; ಅಸಮಾನತೆಯನ್ನು

ಒಪ್ಪುವುದಿಲ್ಲ; ಅವಮಾನವೀಯತೆಯನ್ನು ಘೋಷಿಸುವುದಿಲ್ಲ. ಆದರ ಆದ್ಯತೆಗಳಲ್ಲಿ ಅಂತರವಿರಬಹುದು; ಚಿಂತನೆಯಲ್ಲಿ ವೈರುಧ್ಯಗಳಿರ ಬಹುದು. ಒಟ್ಟಾರೆ ಒಂದಷ್ಟು ಮರುಚಿಂತನೆಗೆ ಒತ್ತಾಸೆಯಾಗಿ ತಾವು ಬದುಕಿದ ಪರಿಸರಕ್ಕೆ ಮಾನವೀಯ ಮಿಡಿತ ತರುವ ಪ್ರಾಮಾಣಿಕ ಪ್ರಯತ್ನದಲ್ಲಿ ತೊಡಗಿರುತ್ತಾರೆ.

ಮೇಲೆ ವಿವರಿಸಿದ ವಿಶಾಲ ವ್ಯಾಪ್ತಿಯ ಹಿನ್ನೆಲೆಯಲ್ಲಿ 'ಸಾಮಾಜಿಕ ಚಿಂತನ ಮಾಲೆ'ಯನ್ನು ರೂಪಿಸಲಾಗಿದೆ. ಕನ್ನಡದ ಸಾಮಾನ್ಯ ಓದುಗರನ್ನು ಗಮನದಲ್ಲಿಟ್ಟುಕೊಂಡು ರೂಪುಗೊಂಡಿರುವ ಈ ಮಾಲೆಯ ಪುಸ್ತಕಗಳು ಏಕಕಾಲಕ್ಕೆ ಪರಿಚಯಾತ್ಮಕವೂ, ಚಿಂತ ನಾತ್ಮಕವೂ ಆಗಿರಬೇಕೆಂದು ಅಪೇಕ್ಷಿಸಲಾಗಿದೆ. ಒಟ್ಟಿನಲ್ಲಿ ಇದು, ಸಾಮಾನ್ಯ ಓದುಗರು ಸಾಮಾಜಿಕ ಚಿಂತನೆಯ ವಿವಿಧ ವಿನ್ಯಾಸಗಳನ್ನು ಅರಿವಿಗೆ ತಂದುಕೊಂಡು ಹೆಚ್ಚಿನ ಓದಿಗೆ ಆಸಕ್ತರಾಗುವಂತೆ ಮಾಡುವ ಒಂದು ವಿನಯಪೂರ್ವಕ ಪ್ರಯತ್ನವಾಗಿದೆ.

ಈ ಸಂದರ್ಭದಲ್ಲಿ ಒಂದು ಮುಖ್ಯ ಸಂಗತಿಯನ್ನು ಹೇಳಲೇ ಬೇಕು. ಸಾಮಾಜಿಕ ಚಿಂತನ ಮಾಲೆಯು ಈ ರೂಪವನ್ನು ಪಡೆಯು ವುದಕ್ಕೆ, ಮೊದಲ ಪ್ರೇರಣೆ ಒದಗಿಸಿದವರು ಅಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾಗಿದ್ದ ಶ್ರೀ ಎಚ್. ವಿಶ್ವನಾಥ್ ಅವರು. ಶ್ರೀ ವಿಶ್ವನಾಥ್ ಅವರಿಗೆ ಕೆಲವು ಸಮಾಜ ಸುಧಾರಕರ ಬಗ್ಗೆ ಕಿರು ಪುಸ್ತಕಗಳನ್ನು ಅಚ್ಚು ಮಾಡಿಸಿ ಕಡಿಮೆ ಬೆಲೆಗೆ ಒದಗಿಸಬೇಕೆಂಬ ಮಹದಾಕಾಂಕ್ಷೆಯಿತ್ತು. ಈ ಕೆಲಸವನ್ನು ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ವಹಿಸಿ ಯೋಜನೆಯೊಂದನ್ನು ಸಿದ್ಧಪಡಿಸುವ ಸಂಪೂರ್ಣ ಹೊಣೆಗಾರಿಕೆಯನ್ನು ನೀಡಿದ್ದಲ್ಲದೆ, ಈ ಯೋಜನೆಗಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೂಲಕ ವಿಶೇಷ ಅನುದಾನವನ್ನು ಮಂಜೂರು ಮಾಡಿದರು. ಶ್ರೀ ವಿಶ್ವನಾಥ್ ಅವರ ಸಹಕಾರವನ್ನು ಕೃತಜ್ಞತೆ ಯಿಂದ ನೆನೆಯುವುದು ನನ್ನ ಕರ್ತವ್ಯವಾಗಿದೆ.

ಇದೇ ಸಂದರ್ಭದಲ್ಲಿ, ಸಹಕಾರವನ್ನು ಮುಂದುವರೆಸಿದ ಇಂದಿನ ಕನ್ನಡ ಮತ್ತು ಸಂಸ್ಕೃತಿ ಸಚಿವರಾದ ಶ್ರೀ ಆರ್. ಎನ್. ನಾಯಕ್ ಅವರಿಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಿಗೂ ಕಾರ್ಯದರ್ಶಿಗಳಿಗೂ ಧನ್ಯವಾದಗಳು.

ಸಾಮಾಜಿಕ ಚಿಂತನ ಮಾಲೆಯ ಪುಸ್ತಕಗಳನ್ನು ಬರೆದುಕೊಟ್ಟ ವಿವಿಧ ಲೇಖಕರಿಗೆ ಕೃತಜ್ಞತೆಗಳನ್ನು ಸಲ್ಲಿಸುತ್ತ ಕನ್ನಡ ಓದುಗರು ಈ ಪುಸ್ತಕಗಳನ್ನು ಓದಿ ಅಕಾಡೆಮಿಯ ಆಶಯವನ್ನು ಸಾರ್ಥಕ ಗೊಳಿಸಬೇಕೆಂದು ವಿನಂತಿಸುತ್ತೇನೆ.

ಅಕ್ಟೋಬರ್ ೧೯೯೪ — ಬರಗೂರು ರಾಮಚಂದ್ರಪ್ಪ
ಬೆಂಗಳೂರು — ಅಧ್ಯಕ್ಷರು

ಲೇಖಕರ ಮಾತು

ಈ ಪುಸ್ತಕ ರಚನೆಯ ಅವಕಾಶ ಒದಗಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿಗೆ ಮತ್ತು ಈ ಕೆಲಸದಲ್ಲಿ ಸಹಕಾರ ನೀಡಿದ ಸ್ನೇಹಿತರಿಗೆ, ಹಿತೈಷಿಗಳಿಗೆ ಕೃತಜ್ಞತೆಗಳು.

ಡಾ. ಶೇಷಶಾಸ್ತ್ರಿ

ವೀರಬ್ರಹ್ಮಯ್ಯ

ಅಧ್ಯಾಯ ೧

ಹಿನ್ನೆಲೆ

ಆಂಧ್ರಪ್ರದೇಶದಲ್ಲಿ ಅನೇಕ ಘಟಾನುಘಟಿಗಳಾದ ಕವಿಗಳು ಆಗಿ ಹೋಗಿದ್ದಾರೆ. ಆದರೆ ಇಂದಿಗೂ ಜನಸಾಮಾನ್ಯರ ನಾಲಿಗೆಯ ಮೇಲೆ ನಲಿಯುತ್ತಿರುವ ಕವಿಗಳ ಸಂಖ್ಯೆ ಕೇವಲ ಬೆರಳೆಣಿಕೆಯಷ್ಟೇ ಎಂದು ಹೇಳಿದರೆ ತಪ್ಪಾಗಲಾರದು. ತನ್ನ ಭಕ್ತಿ, ಕಾವ್ಯಗುಣ, ರಾಜಾಶ್ರಯ ವನ್ನು ಧಿಕ್ಕರಿಸಿ ದಾರಿದ್ರ್ಯವನ್ನೇ ಅಪ್ಪಿಕೊಂಡ ಧೀಮಂತಿಕೆಯಿಂದ ಹೆಸರು ವಾಸಿಯಾದ ಭಕ್ತ ಕವಿ ಪೋತನನು ಸಾಹಿತ್ಯ ಮತ್ತು ಭಕ್ತಿ ಇವುಗಳಲ್ಲಿ ಆಸಕ್ತಿಹೊಂದಿರುವ ವಲಯದಲ್ಲಿ ಸಾಕಷ್ಟು ಜನಪ್ರಿಯನಾಗಿದ್ದಾನೆ. ಅಪಾರವಾದ ಲೋಕಾನುಭವ, ಬದುಕನ್ನು ನಿರ್ಭಿಡೆಯಿಂದ ನೋಡಿ ವಿಮರ್ಶಿಸುವ ಶಕ್ತಿ ಹೊಂದಿರುವ ದಾರ್ಶನಿಕನೂ ಸಾಮಾಜಿಕ ಚಿಂತಕನೂ ಆದ ವೇಮನ ಆಂಧ್ರಪ್ರದೇಶದ ಜನಸಾಮಾನ್ಯರೆಲ್ಲರಿಗೂ ಸುಪರಿಚಿತ. ಈತನ ಪದ್ಯಗಳನ್ನು 'ಕುರಿತೋದದ'ವರೂ ಈತನು ರಚಿಸಿರುವ ವಚನಗಳನ್ನು ತಮ್ಮ ದೈನಂದಿನ ಜೀವನದಲ್ಲಿ ಹಲವಾರು ಬಾರಿ ಪ್ರಯೋಗಿಸಿ ತಮ್ಮ ಅಭಿಪ್ರಾಯ, ಅನುಭವಗಳಿಗೆ ಪುಷ್ಟಿಯನ್ನು ಒದಗಿಸಿಕೊಳ್ಳುತ್ತಾರೆ. ಮೇಲೆ ಹೇಳಿದ ಇಬ್ಬರಿಗಿಂತಲೂ ಭಿನ್ನವಾಗಿ

ರುವ ಶ್ರೀ ವೀರಬ್ರಹ್ಮಯ್ಯ ಪೋತನನ ಕಾವ್ಯಶಕ್ತಿಯನ್ನೂ ವೇಮನನ ಹಾಗೆ ಸಾಮಾಜಿಕ ಚಿಂತನೆಯನ್ನೂ ಹೊಂದದೆ ಹೋದರೂ ಜನ ಸಾಮಾನ್ಯರ ಒಲವಿಗೆ ಪಾತ್ರನಾಗಿದ್ದಾನೆ. ಇದಕ್ಕೆ ಎರಡು ಮುಖ್ಯ ಕಾರಣಗಳು. ಒಂದು ಆತನು ಬರೆದ ಕಾಲಜ್ಞಾನ. ಎರಡನೆಯದು ಆತನು ಸಾಮಾನ್ಯ ಮಾನವನೂ ಕುಲ ಮತ ಭೇದವಿಲ್ಲದೆ ಸಾಧಿಸ ಬಹುದಾದ ಮೋಕ್ಷಸಾಧನೆಯ ಮಾರ್ಗವನ್ನು ತೋರಿದ್ದು. 'ರಾಜ ಯೋಗ'ದಂತಹ ಜಟಿಲವಾದ ಸಾಧನೆಯ ಮಾರ್ಗವನ್ನು ಸಾಮಾನ್ಯ ಜನರ ಪರಿಭಾಷೆಯಲ್ಲಿ, ಅವರಿಗೆ ತೀರಾ ಸಮೀಪವಾದ ಬದುಕಿನಿಂದ ಉಪಮೆಗಳನ್ನು ಬಳಸಿ ಹೇಳಿದ; ಹೇಳಿದಷ್ಟೇ ಅಲ್ಲ; ಆ ಮಾರ್ಗದಲ್ಲಿ ನಡೆಯಲು ಬಂದವರಿಗೆ ದಾರಿ ತೋರಿದ. ಹೀಗಾಗಿ ವೀರಬ್ರಹ್ಮಯ್ಯ ನಂತರಗಲ್ಲಿಯೂ ಆತನು ಹಾಕಿದ ಸಾಧನೆಯ ಮಾರ್ಗ ಒಂದು ಪರಂಪರೆ ಯಾಗಿ ಪ್ರಚಾರಕ್ಕೆ ಬಂದಿದ್ದು, ಇಂದಿಗೂ ಕರ್ನಾಟಕಾಂಧ್ರ ಸರಹದ್ದು ಪ್ರಾಂತ್ಯಗಳಲ್ಲಿ ಬ್ರಹ್ಮಯ್ಯನವರ ಸಂಪ್ರದಾಯ ಮುಂದುವರಿಯುತ್ತಿದೆ.

ಅಧ್ಯಾಯ ೨

ವೀರಬ್ರಹ್ಮಯ್ಯನವರನ್ನು ಕುರಿತ ಸಾಹಿತ್ಯ

ವೀರಬ್ರಹ್ಮಯ್ಯನವರನ್ನು ಕುರಿತು ಇದುವರೆಗೆ ತೆಲುಗು, ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳಲ್ಲಿ ಹಲವಾರು ಪುಸ್ತಕಗಳು, ಲೇಖನಗಳು ಬಂದಿವೆ. ತೆಲುಗಿನಲ್ಲಿ ವೀರಬ್ರಹ್ಮಯ್ಯನವರನ್ನು ಕುರಿತು ನಾಟಕ, ಕಾವ್ಯ, ಬುರ್ರಕಥೆ, ಹರಿಕಥೆ, ಜೀವನಚರಿತ್ರೆಗಳು ಹೊರಬಂದಿವೆ. ಒಂದು ಸಿನಿಮಾ ಕೂಡಾ ಬಂದಿದೆ. ಕಡಪ ಜಿಲ್ಲೆಯ ಮೈದೂಕರಿನ ಆನಂದಾಶ್ರಮದವರು ಇಂಗ್ಲೀಷ್‌ನಲ್ಲಿ ಅವರ ಜೀವನ ಚರಿತ್ರೆಯನ್ನು ಪ್ರಕಟಿಸಿದ್ದಾರೆ. ಇವುಗಳೆಲ್ಲವೂ ಜನಶೃತಿಯಲ್ಲಿ ಪ್ರಚಾರದಲ್ಲಿರುವ ಕತೆಗಳನ್ನು ಆಧರಿಸಿ ರಚಿಸಿದಂತಹವೇ. ಈ ಲೇಖಕರು ಸಾಂದರ್ಭಿಕವಾಗಿ ವೀರಬ್ರಹ್ಮಯ್ಯನವರು ಹೇಳಿದ ತತ್ತ್ವಪದಗಳನ್ನು, ಕಾಲಜ್ಞಾನದ ಪದಗಳನ್ನು ಕಥೆಗೆ ತಕ್ಕಂತೆ ಬಳಸಿಕೊಂಡಿದ್ದಾರೆಯೇ ಹೊರತು, ಆತನ ತತ್ತ್ವಪದಗಳ ಮೂಲಕ ಆತನ ಬದುಕನ್ನು ವಿಶ್ಲೇಷಿಸುವ, ಜೀವನದ ಬಗೆಗಿನ ಆತನ ಧೋರಣೆಯನ್ನು ಅರಿಯುವ ಪ್ರಯತ್ನವನ್ನು ಮಾಡಿಲ್ಲ ವೆಂದು ಹೇಳಬಹುದು.

ವೀರಬ್ರಹ್ಮಯ್ಯನವರನ್ನು ಕುರಿತು ಒಂದು ಪಿಹೆಚ್‌ಡಿ ನಿಬಂಧವೂ ಹೊರಬಂದಿದೆ. ಡಾ॥ ಕನ್ನೆ ಕಂಟಿ ರಾಜಮಲ್ಲಾಚಾರಿಯವರು 'ಪೋತುಲೂರಿ ವೀರಬ್ರಹ್ಮಂಗಾರಿ ಜೀವಿತಂ-ರಚನಲ ಪರಿಶೀಲನ' ಎಂಬ

ನಿಬಂಧವನ್ನು ರಚಿಸಿ ನಾಗಾರ್ಜುನ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿಯನ್ನು ಪಡೆದಿದ್ದಾರೆ. ವೇಮನ ಬಗ್ಗೆ ಉತ್ತಮ ಸಂಶೋಧನೆಯನ್ನು ಮಾಡಿರುವ ಡಾ॥ ಎನ್. ಗೋಪಿಯವರು ವೀರಬ್ರಹ್ಮೇಂದ್ರರ ಬಗ್ಗೆಯೂ ಆಳವಾಗಿ ಅಧ್ಯಯನ ಮಾಡುತ್ತಿದ್ದು, ಇದುವರೆಗೆ ಒಂದೆರಡು ಸಂಪ್ರಬಂಧಗಳನ್ನೂ ಕೂಡ ಬರೆದಿದ್ದಾರೆ. ಡಾ॥ ವೇದವ್ಯಾಸರವರು ವೀರಬ್ರಹ್ಮಯ್ಯನವರ ಜೀವನ ಮತ್ತು ಕಾಲಜ್ಞಾನವನ್ನು ಕುರಿತು 'ಸಂಶೋಧನಾ' ಕೃತಿಗಳನ್ನು ಹೊರತಂದಿದ್ದಾರೆ.

ಮೇಲೆ ಹೇಳಿದ ಎಲ್ಲಾ ಕೃತಿಗಳೂ ಈ ಹಿಂದೆಯೇ ಹೇಳಿದಂತೆ ಜನಪದರಲ್ಲಿ ಪ್ರಚಲಿತವಿರುವ ಕಥೆಗಳನ್ನು ಆಧರಿಸಿದ್ದೇ ಆಗಿವೆ. ಸಂಶೋಧನಾ ಕೃತಿಗಳೆಂದು ಕರೆದುಕೊಂಡಿರುವ ಕೃತಿಗಳಲ್ಲಿಯೂ, ಜನಪ್ರಿಯ ಕಥೆಗಳನ್ನು ಪುರಾಣವೆಂದು ಬದಿಗಿರಿಸುವುದೂ ಇಲ್ಲ: ಆ ತೆರನ ಕಥೆಗಳ ಹಿಂದಿನ ಆಶಯಗಳನ್ನು ಗುರುತಿಸುವ ಪ್ರಯತ್ನವನ್ನು ಮಾಡಿಲ್ಲ. ವೀರಬ್ರಹ್ಮಯ್ಯನವರನ್ನು ಮಹಾ ಪ್ರಗತಿವಾದಿಯನ್ನಾಗಿ ಚಿತ್ರಿಸುವ ಡಾ॥ ರಾಜಮಲ್ಲಾಚಾರಿಯವರಾಗಲೀ, ಡಾ॥ ಎನ್. ಗೋಪಿಯವರಾಗಲಿ ತಮ್ಮ ಹೇಳಿಕೆಗಳಿಗೆ ವೀರಬ್ರಹ್ಮಯ್ಯನವರ ಕೃತಿಗಳಿಂದ ಆಧಾರಗಳನ್ನು ಒದಗಿಸುವಲ್ಲಿ ಹಿಂದೆ ಬಿದ್ದಿದ್ದಾರೆ. ವೀರಬ್ರಹ್ಮಯ್ಯನವರನ್ನು 'ಸಂಪ್ರದಾಯ ಶೀಲ' ವ್ಯಕ್ತಿಯನ್ನಾಗಿ ಗುರುತಿಸುವ ಡಾ॥ ವೇದವ್ಯಾಸರು, ವೀರಬ್ರಹ್ಮಯ್ಯನವರನ್ನು ಪ್ರಗತಿಶೀಲರನ್ನಾಗಿ ಕಾಣುವವರ ಮೇಲೆ ತಮ್ಮ ಕೃತಿಯುದ್ದಕ್ಕೂ ಹರಿಹಾಯ್ದಿದ್ದಾರೆಯೇ ಹೊರತು ಅವರೂ ಖಚಿತವಾದ ಸ್ಪಷ್ಟವಾದ ವಿಶ್ಲೇಷಣೆಯನ್ನು ಮಾಡಿಲ್ಲ. ಈ ಕಾರಣದಿಂದಾಗಿ ಅವರೂ ಖಚಿತವಾದ ಸ್ಪಷ್ಟವಾದ ವಿಶ್ಲೇಷಣೆಯನ್ನು ಮಾಡಿಲ್ಲ. ಈ ಕಾರಣದಿಂದಾಗಿ ಇವರು ಯಾರೂ ವೀರಬ್ರಹ್ಮಯ್ಯನವರ ವ್ಯಕ್ತಿತ್ವವನ್ನು ಅನಾವರಣ ಮಾಡುವ ಬದಲು ತಮ್ಮನ್ನು ತಾವು ಅನಾವರಣ ಮಾಡಿಕೊಳ್ಳುತ್ತ ತಮ್ಮ ಒಲವಿನ ಸಿದ್ಧಾಂತಗಳ ಮಂಡನೆಗೆ 'ವೀರಬ್ರಹ್ಮಯ್ಯ'ನವರನ್ನು ನಿಮಿತ್ತವಾಗಿ

ಬಳಸಿಕೊಂಡಿರುವಂತೆ ಕಂಡುಬರುತ್ತದೆ. ಇದೇ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕು. ವೀರಬ್ರಹ್ಮಯ್ಯನವರನ್ನು ಕುರಿತು ಚಲನಚಿತ್ರ ಬಂತು. ಆದರಲ್ಲಿ ವೀರಬ್ರಹ್ಮಯ್ಯನವರು ಬ್ರಾಹ್ಮಣರನ್ನು ಅವಹೇಳನ ಮಾಡಿದಂತೆ ವಿಪರೀತವಾಗಿ ಚಿತ್ರಿಸಲಾಗಿದ್ದು, ಆ ಬಗ್ಗೆ ಸ್ವಲ್ಪ ಮುಸುಕಿನ ಗುದ್ದಾಟವೂ ನಡೆಯಿತು. ಮೇಲೆ ಹೇಳಿದ ಕೃತಿಗಳಿಗಿಂತಲೂ ಜನಶ್ರುತಿಯನ್ನು ಆಧರಿಸಿಯೂ, ನಿಷ್ಪಕ್ಷಪಾತವಾಗಿ ವೀರಬ್ರಹ್ಮಯ್ಯನವರ ಬಗ್ಗೆ ಬರೆದಿರುವ ಶ್ರೀ ಜಸಂಗುಲ ನಾಗಭೂಷಣ ದಾಸು ಅವರ "ಕಾಲಜ್ಞಾನ ಸಹಿತ ಶ್ರೀ ಶ್ರೀ ಶ್ರೀ ವೀರಬ್ರಹ್ಮೇಂದ್ರ ಸ್ವಾಮುಲವಾರಿ ಚರಿತ್ರ ಮತ್ತು ಪಂಡಿತ ಏರೂರಿ ಸೀತಾರಾವ್ ಅವರ ಶ್ರೀ ಪೋತುಲೂರಿ ವೀರಬ್ರಹ್ಮಂಗಾರಿ ಚರಿತ್ರ" ಎಂಬುವು ಗಮನಾರ್ಹವಾದುವು. ಘಟನೆಗಳನ್ನು ದಾಖಲಿಸುವಲ್ಲಿ ಅವರು ತೋರಿರುವ ಪ್ರಾಮಾಣಿಕತೆ ಮೆಚ್ಚತಕ್ಕದ್ದು.

ವೀರಬ್ರಹ್ಮಯ್ಯನವರ ಕೃತಿಗಳ ಶಾಸ್ತ್ರೀಯ ಸಂಪಾದನೆ ಇದುವರೆಗೆ ಆಗದಿರುವುದರಿಂದ, ಅವರ ಕೃತಿಗಳಲ್ಲಿ ಪ್ರಕ್ಷಿಪ್ತ ಭಾಗ ಯಾವುದು ಮೂಲ ಯಾವುದು ಎಂಬುದನ್ನು ಗುರುತಿಸುವುದು ಕಷ್ಟ. ಹೀಗಾಗಿ ಅವರ ಜೀವನ ಚರಿತ್ರೆಯನ್ನು, ಅವರ ಧೋರಣೆ ಮತ್ತು ಸಿದ್ಧಾಂತಗಳನ್ನು ಅರಿಯುವಲ್ಲಿ ಅನೇಕ ಎಡರು-ತೊಡರುಗಳು ಎದುರಾಗುತ್ತವೆ. ಆದ್ದರಿಂದ ಅನಿವಾರ್ಯವಾಗಿ ಇದುವರೆಗೆ ಪ್ರಕಟಿತವಾಗಿರುವ ಪುಸ್ತಕಗಳ ಪಾಠವನ್ನೇ ಅನುಸರಿಸಬೇಕಾಗಿದೆ.

ಅಧ್ಯಾಯ ೩

ವೀರಬ್ರಹ್ಮಯ್ಯನವರ ಕಾಲ

ವೀರಬ್ರಹ್ಮಯ್ಯನವರು ತಮ್ಮ ಯಾವುದೇ ಕೃತಿಯಲ್ಲಿ ತಾವು ಹುಟ್ಟಿದ, ಸಮಾಧಿಯಾಗುವ ಅಥವಾ ಸಾಂಸಾರಿಕವಾದ, ವ್ಯಕ್ತಿ ಜೀವನಕ್ಕೆ ಸಂಬಂಧಿಸಿದ ಯಾವದೊಂದು ವಿವರಗಳನ್ನು ನೀಡಿಲ್ಲ. ಅವರನ್ನು ಕುರಿತ ಅಧಿಕೃತವಾದ ಯಾವುದೇ ದಾಖಲೆಗಳೂ ಇದುವರೆಗೆ ಲಭ್ಯವಾಗಿಲ್ಲ. ಹೀಗಾಗಿ ಅವರು ಜೀವಿಸಿದ್ದ ಕಾಲಾವಧಿಯು ಬಗ್ಗೆ ಭಿನ್ನಾಭಿಪ್ರಾಯಗಳಿವೆ. ಜನಸಾಮಾನ್ಯರು ಮತ್ತು ಅವರ ಶಿಷ್ಯ ಪರಂಪರೆಯವರೂ ವೀರಬ್ರಹ್ಮಯ್ಯನವರು ಈಗಲೂ ಜೀವಸಮಾಧಿಯಾಗಿ ತಪಸ್ಸು ಮಾಡುತ್ತಿರುವುದಾಗಿಯೂ ಭಾವಿಸಿದ್ದಾರೆ. ಹನ್ನೆರಡನೆಯ ಶತಮಾನದವನೆಂದು ಕೆಲವರು, ಹದಿನೆಂಟನೆಯ ಶತಮಾನದವನೆಂದು ಕೆಲವರು ಅಭಿಪ್ರಾಯ ಪಟ್ಟಿದ್ದಾರೆ. ವೀರಬ್ರಹ್ಮಯ್ಯನವರ ಕಾಲವನ್ನು ಚಾರಿತ್ರಿಕ ದೃಷ್ಟಿಯಿಂದ ಮಠದಲ್ಲಿನ ಸಮಾಧಿಗಳ ರಚನೆಯು ಸ್ವರೂಪ, ವೀರಬ್ರಹ್ಮಯ್ಯನವರ ವಂಶಾವಳಿಯನ್ನು ಆಧರಿಸಿ ಸುಮಾರು ಹದಿನೇಳನೆಯ ಶತಮಾನವೆಂದು ಕೊಂಡೂರಿ ವೀರ ರಾಘವಾಚಾರ್ಯರು ಊಹಿಸಿದರು. ಇನ್ನು ಈ ಬಗ್ಗೆ ವಿವರವಾಗಿ ಅಧ್ಯಯನ ಮಾಡಿರುವ ಶ್ರೀ ಕೋಡಾಲಿ ಲಕ್ಷ್ಮಿನಾರಾಯಣರು ೧೬೦೮ ರಿಂದ ೧೬೯೩ರ ಅವಧಿ

ಯಲ್ಲಿ ವೀರಬ್ರಹ್ಮಯ್ಯನವರು ಜೀವಿಸಿದ್ದಿರಬೇಕೆಂದು ಊಹಿಸುತ್ತಾರೆ. ಶ್ರೀ ರಾಜು ಮಲ್ಲಾಚಾರಿಯವರು ಕಾಲಜ್ಞಾನದಲ್ಲಿ ಹೇಳಿರುವ ಕೆಲವು ಅಂಶಗಳನ್ನು 'ಚಾರಿತ್ರಿಕ' ಘಟನೆಗಳಾಗಿ ವ್ಯಾಖ್ಯಾನಮಾಡಿ, ಅವುಗಳ ಆಧಾರವಾಗಿ ವೀರಬ್ರಹ್ಮಯ್ಯನವರು ೧೬೦೮ರಲ್ಲಿ ಜನಿಸಿ ೧೬೯೩ರ ಶ್ರೀಮುಖನಾಮ ಸಂವತ್ಸರದ ವೈಶಾಖ ಶುದ್ಧ ದಶಮಿ ಜೀವಸಮಾಧಿ ಯಾದರೆಂಬುದಾಗಿ ಹೇಳುತ್ತಾರೆ. ಡಾ॥ ವೇದವ್ಯಾಸ ಅವರು ಇಂಥದೇ ಆಧಾರದ ಮೇಲೆ ತಾವು ಬರೆದಿರುವ ವೀರಬ್ರಹ್ಮಯ್ಯನವರ ಬಗೆಗಿನ ಸಂಶೋಧನಾ ಪುಸ್ತಕದಲ್ಲಿ ಬ್ರಹ್ಮಯ್ಯನವರು ೧೭-೪-೧೬೯೨ರ ಮಧ್ಯಾಹ್ನ ೧೨ ಘಂಟೆಗೆ ಜೀವಸಮಾಧಿ ಹೊಂದಿದರೆಂದು ಹೇಳುತ್ತಾರೆ.

ಶ್ರೀ ರಾಜು ಮಲ್ಲಾಚಾರಿಯವರು ಮತ್ತು ಡಾ॥ ವೇದವ್ಯಾಸ ಅವರು ಬ್ರಹ್ಮಯ್ಯನವರ ಕಾಲ ನಿಷ್ಕರ್ಷೆಗೆ ಆಧಾರವಾಗಿ ಬಳಸಲಾಗಿ ರುವ ಆಕರ, 'ಕಾಲಜ್ಞಾನ' ಗ್ರಂಥ. ಇದುವರೆಗೆ ಕಾಲಜ್ಞಾನದ ಖಚಿತ ವಾದ ಪಾಠ ಯಾವುದು, ಅವುಗಳಲ್ಲಿನ ಅಂಶಗಳನ್ನು ಹೇಗೆ ಅರ್ಥೈಯಿಸ ಬೇಕೆಂಬುದರ ಬಗ್ಗೆ ಶಾಸ್ತ್ರೀಯವಾದ ಆಲೋಚನೆಗಳು ಏರ್ಪಟ್ಟಿಲ್ಲ. ಹೀಗಾಗಿ ಈ ಇಬ್ಬರ ಅಭಿಪ್ರಾಯಗಳ ಹಿಂದೆ 'ನಾವು ಹಿಂದಿನ ವಿದ್ವಾಂಸರಿ ಗಿಂತಲೂ ಒಂದು ಹೆಜ್ಜೆ ಮುಂದಿದ್ದೇವೆ' ಎಂಬ ಧೋರಣೆಯೇ ಕೆಲಸ ಮಾಡಿರುವಂತೆ ತೋರುತ್ತದೆ. ಮಠದ ದಾಖಲೆಗಳು ಮತ್ತು ವಂಶಾ ವಳಿಯ ಆಧಾರದ ಮೇಲೆ ಶ್ರೀ ಕೋಡಾಲಿ ಲಕ್ಷ್ಮೀನಾರಾಯಣರು ನಿಷ್ಕರ್ಷೆ ಮಾಡಿರುವ ಕಾಲವೇ ಹೆಚ್ಚು ಸೂಕ್ತವಾದುದು ಹಾಗೂ ಪ್ರಾಮಾಣಿಕವಾದುದು.

ವೀರಬ್ರಹ್ಮಯ್ಯನವರನ್ನು ಹಲವಾರು ವಿಧಗಳಲ್ಲಿ ಹೋಲುವ ತಿಂಥಿಣಿಯ ಮೋನಪ್ಪಯ್ಯ ಎಂಬ ಸಾಧಕನು ಕರ್ನಾಟಕದಲ್ಲಿ ಸರಿ ಸುಮಾರಾಗಿ ಇದೇ ಅವಧಿಯಲ್ಲಿ ಜೀವಿಸಿದ್ದನು. ಆತನ ಬಗ್ಗೆ ಜಾನಪದರು ಹಾಡುಗಳನ್ನು ಕಟ್ಟಿ ಹಾಡಿದ್ದಾರೆ. ಆತನ ನಂತರದ

ಕಾಲದಲ್ಲಿಯೇ ಆತನ ಬಗ್ಗೆ ಒಂದೆರಡು ಕೃತಿಗಳೂ ಸಹ ರಚಿತವಾಗಿವೆ. ಆದರೆ ವೀರಬ್ರಹ್ಮಯ್ಯ ಸಾಧನೆಯ ಮಾರ್ಗವು ಒಂದು ಸಂಪ್ರದಾಯವಾಗಿ ಬೆಳೆದುಬಂದಿದ್ದರೂ ಆತನ ಬಗ್ಗೆ ತೆಲುಗು ಜಾನಪದ ಮತ್ತು ಶಿಷ್ಟ ಸಾಹಿತ್ಯಗಳು ಮೌನ ವಹಿಸಿವೆ.

ಅಧ್ಯಾಯ ೪

ವೀರಬ್ರಹ್ಮಯ್ಯ–ಎಂಬ ಹೆಸರು

ವೀರಬ್ರಹ್ಮಯ್ಯನವರಿಗೆ ಅವರ ತಂದೆ-ತಾಯಿಗಳು ಯಾವ ಹೆಸರಿಟ್ಟಿದ್ದರು ಎಂಬುದು ಖಚಿತವಾಗಿ ತಿಳಿದಿಲ್ಲ. ಈತನನ್ನು ಜನ ವೀರನಾರಾಯಣಪ್ಪ, ವೀರಪ್ಪ, ವೀರಪ್ಪಯ್ಯ ಮುಂತಾದ ಹೆಸರುಗಳಿಂದ ವ್ಯವಹರಿಸುತ್ತಿದ್ದರು. ಇವರು ಜನಸಾಮಾನ್ಯರಿಗೂ ಅರ್ಥವಾಗುವಂತೆ ಬ್ರಹ್ಮಜ್ಞಾನವನ್ನೇ ಹಂಚುತ್ತಿದ್ದ ಕಾರಣ; ಅಂದರೆ ಮಾನವನೊಳಗಿನ 'ನಾನು' ಯಾರು? ಅದನ್ನು ಹೇಗೆ ಅರಿಯಬೇಕು ಮುಂತಾದ ಬ್ರಹ್ಮಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ತಿಳಿಸುತ್ತಾ ಆ 'ನಾನು' ಎಂಬುದೇ ಬ್ರಹ್ಮ–ಎಂಬುದಾಗಿ ಸರಳವಾಗಿ ವ್ಯಾಖ್ಯಾನಿಸಿದರು. ಹೀಗಾಗಿ ಜನಸಾಮಾನ್ಯರ ಮತ್ತು ಅವರ ಪ್ರವಚನವನ್ನು ಅನುಷ್ಠಾನಕ್ಕೆ ತರಲು ಯತ್ನಿಸಿದವರ ಪಾಲಿಗೆ ಅವರು 'ಬ್ರಹ್ಮ'ನೇ ಆದರು. ಹೀಗಾಗಿ ಅವರಿಗೆ ಕಾಲಾನಂತರದಲ್ಲಿ 'ಬ್ರಹ್ಮಯ್ಯ' ಎಂಬ ಹೆಸರು ಬಂದಿರಬೇಕು. ಈ ಅನ್ವರ್ಥನಾಮವು ವ್ಯವಹಾರನಾಮವಾದ ವೀರಪ್ಪಯ್ಯ, ವೀರಯ್ಯ ಎಂಬುದೊಂದಿಗೆ ಸೇರಿಕೊಂಡು ವೀರಬ್ರಹ್ಮಯ್ಯ ಎಂದಾಗಿರಬೇಕು. ಇಂದಿಗೂ ಆ ಸಂಪ್ರದಾಯದಲ್ಲಿರುವವರು ವೀರಬ್ರಹ್ಮಂ ಎಂಬುದಕ್ಕಿಂತಲೂ 'ಬ್ರಹ್ಮಂ ಅವರು' ಎಂದೇ ವೀರಬ್ರಹ್ಮಯ್ಯನವರನ್ನು ಗುರುತಿಸುವುದು.

ಮನೆಯ ಹೆಸರು (ಅದು ಊರಿನ ಹೆಸರಾಗಿರಬಹುದು, ವೃತ್ತಿಯ ಹೆಸರಾಗಿರಬಹುದು, ಅಥವಾ ಅಡ್ಡ ಹೆಸರಾಗಿರಬಹುದು) ಸಾಮಾನ್ಯವಾಗಿ ತೆಲುಗಿನಲ್ಲಿ ವ್ಯಕ್ತಿ ನಾಮಕ್ಕಿಂತಲೂ ಮೊದಲು ಬರುತ್ತದೆ. ಈ ಕಾರಣದಿಂದಾಗಿಯೇ ವೀರಬ್ರಹ್ಮಯ್ಯನವರಿಗೆ ಹೆಸರಿನ ಮೊದಲು 'ಪೋತುಲೂರು' ಎಂಬ ಗ್ರಾಮಸೂಚಕ ನಾಮವಿರುವುದು. ವೀರಬ್ರಹ್ಮಯ್ಯನವರನ್ನು 'ಪೋತಲೂರಯ್ಯ' ಎಂಬುದಾಗಿ ವ್ಯವಹರಿಸುವುದೂ ಉಂಟು. ಈ 'ಪೋತುಲೂರು' ಎಂಬ ಹೆಸರು ಅವರಿಗೆ ವಂಶಪಾರಂಪರ್ಯವಾಗಿ ಬಂದದ್ದಲ್ಲ, ಅಥವಾ ಬಾಲ್ಯದಲ್ಲಿ ಈತನನ್ನೇ ಬೆಳೆಸಿಕೊಂಡವರ ಮನೆಯ ಹೆಸರೂ ಅಲ್ಲ. ಪಾಪಾಗ್ನಿ ಮಠವನ್ನು ಬಿಟ್ಟು ದೇಶ ಪರ್ಯಟನೆ ಮಾಡುತ್ತಾ ಕರ್ನೂಲು ಜಿಲ್ಲೆಯ ಪೋತಲೂರು ಎಂಬ ಗ್ರಾಮದಲ್ಲಿ ನಿವಾಸವಾಗಿದ್ದು ಅನಂತರ ಅಲ್ಲಿಂದ ಬನಗಾನಪಲ್ಲಿ ಎಂಬಲ್ಲಿ ಬಂದು ಅಲ್ಲಿ ಸ್ಥಿರವಾಗಿ ನೆಲೆನಿಂತರು. ಈ ಕಾರಣದಿಂದ ಬನಗಾನಪಲ್ಲಿಯ ಜನ ಇವರನ್ನು ಪೋತಲೂರು ಎಂಬ ಊರಿಂದ ಬಂದ ಕಾರಣ 'ಪೋತಲೂರಿ ವೀರಯ್ಯ' ಎಂದು ಕರೆದರು. ಹೀಗಾಗಿ ಇವರಿಗೆ ಪೋತಲೂರಿ ವೀರಯ್ಯ, ವೀರಬ್ರಹ್ಮಯ್ಯ ಎಂಬ ಹೆಸರುಗಳು ಬಂದುವು. ಇವರು ಸಮಾಧಿಯನ್ನು ಹೊಂದಿದ ನಂತರ 'ಶ್ರೀ ಶ್ರೀ ಶ್ರೀ ವೀರಬ್ರಹ್ಮೇಂದ್ರಸ್ವಾಮಿ' ಮುಂತಾದ ಹೆಸರುಗಳು ಬಂದುವು.

ತಂದೆ–ತಾಯಿಗಳು :

ಅದ್ವೈತ ಸಿದ್ಧಾಂತವನ್ನು ಸಾಕ್ಷಾತ್ಕರಿಸಿಕೊಂಡಿದ್ದ ವೀರಬ್ರಹ್ಮಯ್ಯನವರು, ತಮ್ಮ ಯಾವ ಕೃತಿಯಲ್ಲಿಯೂ ತಮ್ಮ ತಂದೆ ತಾಯಿಗಳ ಹೆಸರನ್ನು ಹೇಳಿಕೊಂಡಿಲ್ಲ. ಆ ತಂದೆ ತಾಯಿಗಳು ಈ ದೇಹದ ಸೃಷ್ಟಿಗೆ ಕೇವಲ ಕಾರಣರಾದವರಷ್ಟೇ ಎಂಬುದನ್ನು ಸೈದ್ಧಾಂತಿಕವಾಗಿ ನಂಬಿದ್ದ ವೀರಬ್ರಹ್ಮಯ್ಯ ತನ್ನ ಅಂದರೆ 'ಬ್ರಹ್ಮ'ದ ತಂದೆ ತಾಯಿಗಳು ಪ್ರಕೃತಾಂಬ ಮತ್ತು ಪರಿಪೂರ್ಣಾಚಾರ್ಯ ಎಂದು ಹೇಳಿದ್ದರ

ತಾತ್ವಿಕ ಹಿನ್ನೆಲೆಯನ್ನು ಗುರುತಿಸದ ಜನ ಅವುಗಳೇ ಅವರ ತಂದೆ ತಾಯಿ ಗಳ ಹೆಸರುಗಳಿರಬೇಕೆಂದು ಭಾವಿಸಿದರು. ಇತ್ತೀಚಿನ ಸಂಶೋಧಕರು ಅವು ವಾಸ್ತವವಾದ ಹೆಸರುಗಳಲ್ಲ, ಕೇವಲ ಕಲ್ಪಿತವಾದ ಹೆಸರು ಗಳು ಎಂಬುದಾಗಿ ಸಾರಿದರು. ಇಲ್ಲಿ ನಾವು ಅಲ್ಲಮನ ಜೀವನವನ್ನು ಕುರಿತು ಚಾಮರಸನು ಬರೆದ ಪ್ರಭುಲಿಂಗ ಲೀಲೆಯಲ್ಲಿ ಪ್ರಭುದೇವರ ತಂದೆ ತಾಯಿಗಳ ಹೆಸರುಗಳನ್ನು ಇದೇ ರೀತಿ ಸಾಂಕೇತಿಕವಾಗಿ ಹೇಳಿ ರುವ ಅಂಶವನ್ನು ಸ್ಮರಿಸಿಕೊಂಡರೆ ಈ 'ಪ್ರಕೃತಾಂಬ' ಮತ್ತು 'ಪರಿ ಪೂರ್ಣಾಚಾರ್ಯ' ಎಂಬ ಹೆಸರುಗಳ ಹಿಂದೆ ಇರುವ ಔಚಿತ್ಯವು ಅರ್ಥ ವಾದೀತು.

'ಪ್ರಕೃತಾಂಬ' ಮತ್ತು 'ಪರಿಪೂರ್ಣಾಚಾರ್ಯ' ಪುತ್ರನನ್ನು ಪಡೆ ಯುವ ಅಪೇಕ್ಷೆಯಿಂದ ಕಾಶಿಯ ವಿಶ್ವನಾಥನನ್ನು ಸೇವಿಸಿದರು. ಅವನ ಅಂಶದಿಂದ ವೀರಯ್ಯ ಜನಿಸಿದ. ಇವನು ಎಳೆಮಗುವಿರುವಾಗಲೇ ತಾಯಿ ತಂದೆಗಳು ತೀರಿಕೊಂಡರು. ಆಗ ಇವನನ್ನು ಅತ್ರಿ ಮಹಾ ಮುನಿಗಳು ಪೋಷಿಸಿ ಅನಂತರ ಪುತ್ರಾಪೇಕ್ಷೆಯಿಂದ ಕಾಶಿಗೆ ಬಂದ ಪಾಪಾಗ್ನಿಮಠದ (ಇದು ಕೋಲಾರ ಜಿಲ್ಲೆ, ಚಿಕ್ಕಬಳ್ಳಾಪುರ ತಾಲ್ಲೂಕು ನಂದಿ ಬೆಟ್ಟದ ಸಮೀಪದಲ್ಲಿದೆ) ಅಧಿಪತಿಯಾದ ವೀರಭೋಜ್ಯಾಚಾರ್ಯ ಮತ್ತು ವೀರಪಾಪಮಾಂಬೆಯರಿಗೆ ಕೊಟ್ಟನೆಂದು ನಂತರ ಅವರ ಪೋಷಣೆಯಲ್ಲಿಯೇ ವೀರಯ್ಯ ಬೆಳೆದನೆಂದು ಕತೆಯಿದೆ.

ಕೆಲವು ಕಾಲದ ನಂತರ ವೀರಭೋಜ್ಯಾಚಾರ್ಯರು ಮರಣ ಹೊಂದಿ ದ್ದರು. ಈ ಸಾವಿನಿಂದ ವೀರಬ್ರಹ್ಮ ಎಳ್ಳಷ್ಟು ವಿಚಲಿತನಾಗಲಿಲ್ಲ. ತನ್ನ ಗಂಡಿನ ಸಾವಿನಿಂದ ವೀರಪಾಪಮ್ಮ ಧೃತಿಗೆಟ್ಟಳು. ಆದರೆ ಬಾಲಕ ನಾದ ವೀರಯ್ಯ ಸ್ಥಿತಪ್ರಜ್ಞನಂತೆ ತನ್ನ ಸಾಕು ತಾಯಿಗೆ ಹುಟ್ಟು-ಸಾವು ಗಳ ಸಹಜತೆಯನ್ನು ಕುರಿತು ವಿವರಿಸಿದ. ಇದು ವೀರಬ್ರಹ್ಮಯ್ಯ ನವರ ಜೀವನದಲ್ಲಿನ ಮೊದಲ ಘಟ್ಟ. ತನ್ನ ಸಾಕು ತಾಯಿಯ ಅಪ್ಪಣೆ ಯನ್ನು ಪಡೆದು ದೇಶ ಸಂಚಾರಕ್ಕೆ ಹೊರಟ. ಈ ಸಮಯದಲ್ಲಿ

ಅವನು ಅಪಾರವಾದ ಲೋಕಾನುಭವವನ್ನು ಹೊಂದುವುದರ ಮೂಲಕ ತನ್ನೊಳಗಿನ ತನ್ನನ್ನೇ ಅರಿಯುತ್ತಾ ಹೋದ. ಇಲ್ಲಿಂದ ಮುಂದೆ ವೀರಬ್ರಹ್ಮಯ್ಯ ಯಾವ ಗುರುವನ್ನು ದರ್ಶಿಸಿದ, ಅವನ ಸಾಧನೆಗಳೇನು ಎಂಬುದರ ವಿವರಗಳು ದೊರೆಯುವುದಿಲ್ಲ. ಬದಲಾಗಿ ವೀರಬ್ರಹ್ಮಯ್ಯ 'ಅವತಾರ ಪುರುಷ'ನೆಂದು ನಂಬುವ ಜನ ಆತನು ಮೆರೆದನೆಂದು ಹೇಳಲಾದ ಪವಾಡಗಳನ್ನು ಪಟ್ಟಿಮಾಡುತ್ತಾರೆ–ಅವು ಹೀಗಿವೆ :

ಎಳೆಯಮಗುವಾಗಿದ್ದಾಲೇ ಆತನಿಗೆ ನಾಗರಹಾವು ಹೆಡೆ ಎತ್ತಿ ನೆರಳುಕೊಟ್ಟಿತು. ತನ್ನ ಸಾಕು ತಂದೆಯಾದ ವೀರಭೋಜ್ಯಾಚಾರ್ಯರು ತೀರಿಕೊಂಡಾಗ ತನ್ನ ಸಾಕು ತಾಯಿಗೆ ವಿಶ್ವರೂಪವನ್ನು ತೋರಿಸುವುದರ ಮೂಲಕ ತಾನು ದೈವಾಂಶ ಸಂಭೂತನಷ್ಟೇ ಅಲ್ಲ ಸಾಕ್ಷಾತ್ ದೈವ ಎಂಬುದನ್ನು ತೋರಿಸಿದ.

ಆನಂದ ಭೈರವವರ್ಮನ ಗೋಹತ್ಯಾಪಾಪವನ್ನು ಪರಿಹರಿಸಿದ, ನೀರಲ್ಲಿ ಮುಳುಗಿಹೋಗುತ್ತಿದ್ದ ವಿದ್ಯಾರ್ಥಿಗಳನ್ನು ರಕ್ಷಿಸಿದ, ಹಸುಗಳನ್ನು ಮೇಯಿಸುವ ಕೆಲಸವನ್ನು ಬನಗಾನಪಲ್ಲಿಯಲ್ಲಿ ನಿರ್ವಹಿಸುವಾಗ ಆತನು ತೋರಿದ ಪವಾಡಗಳು. ಬ್ರಹ್ಮಯ್ಯನವರ ಹಣೆಯ ಮೇಲಿದ್ದ ವಿಭೂತಿಯನ್ನು ಕುಚೇಷ್ಟೆಯಿಂದ ಅಳಿಸಿದ ಸಾಹೇಬ ಸುಟ್ಟುಭಸ್ಮವಾದನು. ತಾನು ಕೆಲಸಕ್ಕಿದ್ದ ಗರಿಮರೆಡ್ಡಿ ಅಚ್ಚಮ್ಮನವರ ಮಗನ ಅಂಧತ್ವವನ್ನು ಕಳೆದನು. ಈತನ ತಪಶ್ಶಕ್ತಿಯನ್ನು ನೋಡಿ ಪರೀಕ್ಷಿಸಬೇಕೆಂದು ನವಾಬ ಮಾಂಸವನ್ನು ಕೊಟ್ಟಾಗ ಅವುಗಳನ್ನು ಹಣ್ಣುಗಳಾಗಿ ಮಾರ್ಪಡಿಸಿದ. ಗ್ರಾಮದೇವತೆಯಾದ ಪೋಲೇರಮ್ಮನಿಂದ ಬೆಂಕಿಯನ್ನು ತರಿಸಿದ ತನ್ನನ್ನು ಅವಹೇಳನಮಾಡಲು ನಂದ್ಯಾಲದ ಸ್ವರ್ಣಕಾರನೊಬ್ಬನು ಸುಡುವ ಲೋಹದ ರಸವನ್ನು ಕೊಟ್ಟಾಗ ಅದನ್ನು ನೀರಿನಂತೆ ಕುಡಿದ. ಸತ್ತವನನ್ನು ಬದುಕಿಸಿದ್ದು ಕೇಳಿದ ಜನ ವೀರಯ್ಯನವರನ್ನು ಅವಹೇಳನ ಮಾಡಬೇಕೆಂದು ಬದುಕಿದವನೇ ಸತ್ತಂತೆ ನಟಿಸಿ ಅವರ ಮುಂದೆ ಹೋದಾಗ ಅವನನ್ನು ನಿಜವಾಗಿ ಸತ್ತವನಂತೆ

ಮಾಡಿದ. ಹಾವು ಕಚ್ಚಿದವನನ್ನು ಬದುಕಿಸಿದ. ಹೈದರಾಬಾದ್ ನವಾಬನ ಆಸ್ಥಾನವಲ್ಲಿ ನೀರಿನಿಂದ ಜ್ಯೋತಿಗಳನ್ನು ಬೆಳಗಿಸಿದ. ಕುಷ್ಠರೋಗವನ್ನು ಗುಣಪಡಿಸಿದ. ಆತ ತನ್ನ ಶಿಷ್ಯರಿಗೆ ಬ್ರಹ್ಮಜ್ಞಾನದ ಬಗ್ಗೆ ಪ್ರವಚನ ಮಾಡುವುದನ್ನು ಕೇಳಿ ಜೀವವನ್ನು ನೋಡಬೇಕೆಂದು ಮುಗ್ಧತೆಯಿಂದ ತನ್ನ ಹೆಂಡತಿಯನ್ನು ತುಂಡು ತುಂಡಾಗಿ ಕತ್ತರಿಸಿ ಏನೂ ಕಾಣದೆ ಬೆದರಿದ ಕಕ್ಕಯ್ಯನ ಮುಗ್ಧಭಕ್ತಿಯನ್ನು ಕಂಡು ಅವನಿಗೆ ಬ್ರಹ್ಮಜ್ಞಾನವನ್ನು ಬೋಧಿಸಿ ಆತನ ಹೆಂಡತಿಯನ್ನು ಬದುಕಿಸಿದ. ಕನಕದುರ್ಗಿಯನ್ನು ಕರೆದು ಮುಡಿಯಲು ಹೂವಿತ್ತ. ಪುಷ್ಪಗಿರಿಯ ಅಗ್ರಹಾರದ ಬ್ರಾಹ್ಮಣರು ವೀರಬ್ರಹ್ಮಯ್ಯನನ್ನು ಹೀಯಾಳಿಸಿ ಅವಮಾನಿಸಿದಾಗ ಕುಪಿತನಾಗಿ, ತನ್ನ ಕಣ್ಣೋಟದಿಂದಲೇ ಆ ಅಗ್ರಹಾರವನ್ನೇ ಸುಟ್ಟ. ದಾರಿಗಳ್ಳರು ಮೇಲೆ ಬಿದ್ದಾಗ ಅವರನ್ನು ಸ್ತಂಭನಗೊಳಿಸಿದ. ಜನರಿಗೆ ಕಾಟ ಕೊಡುತ್ತಿದ್ದ ಬ್ರಹ್ಮರಾಕ್ಷಸಿಯನ್ನು ಬಂಧಿಸಿದ. ಚಳಿಜ್ವರ ಬಂದಾಗ ಅದನ್ನು ತನ್ನ ಯೋಗದಂಡಕ್ಕೆ ನೀಡಿದ. ಕುದುರೆಯ ಹೊಟ್ಟೆಯಲ್ಲಿದ್ದ ಮರಿಯನ್ನು ಹೊರತೆಗೆದು ಅದನ್ನು ತೋರಿಸಿ ನಂತರ ಅದನ್ನು ಹಾಗೆಯೇ ಅವರ ತಾಯಿಯ ಗರ್ಭದಲ್ಲಿ ದಲ್ಲಿ ಸೇರಿಸಿದ. ತನ್ನ ಶಿಷ್ಯನಾದ ಸಿದ್ಧಯ್ಯನಿಗೆ ಒಂದು ಪುಟ್ಟಿಯಷ್ಟು ಅಕ್ಕಿಯಿಂದ ಮಾಡಿದ ಅನ್ನವನ್ನು ತಿನ್ನಿಸಿದ—ಈ ರೀತಿ ಆತನು ತೋರಿದ ಪವಾಡಗಳ ಪಟ್ಟಿಯನ್ನು ನೀಡುತ್ತಾ ಹೋಗಬಹುದು. ಸಾಧಕರಾದ ತಿಂಥಣಿ ಮೋನಯ್ಯ, ಕೈವಾರದ ನಾರಾಯಣಪ್ಪ, ಮಂತ್ರಾಲಯದ ರಾಘವೇಂದ್ರಸ್ವಾಮಿಗಳು ಮುಂತಾದವರ ಜೀವನ ಚರಿತ್ರೆಗಳನ್ನು ಓದುವಾಗ ಇದೇ ತೆರನ ಪವಾಡಗಳು ಕಂಡುಬರುತ್ತವೆ. ಈ ತೆರನ ಪವಾಡಗಳನ್ನು ಅವರು ತೋರಿಸಿದ್ದರೋ ಇಲ್ಲವೋ ಆದರೆ ಸಾಧಕನ ಜೀವನ ಚರಿತ್ರೆಯ 'ಆಶಯ'ಭಾಗಗಳಾಗಿ ಇವು ಅನಿವಾರ್ಯವಾಗಿರುತ್ತವೆ ಎಂಬುದನ್ನು ಗುರುತಿಸಬೇಕು. ಇವುಗಳನ್ನು 'ವಾಸ್ತವ' ಅಂಶಗಳೆಂದು ಗುರುತಿಸುವುದಕ್ಕಿಂತ 'ಆಶಯ'ಗಳಾಗಿ ಗುರುತಿಸುವುದು

ಸೂಕ್ಷ್ಮವೆಂದು ತೋರುತ್ತದೆ. ಯಾವ ಸಾಧಕನಿಗೂ ತಮ್ಮ ಮಹಿಮೆಯನ್ನು ತೋರಬೇಕೆಂಬ ಹಂಬಲವಾಗಲಿ, ಕಾತರವಾಗಲಿ ಇರುವುದಿಲ್ಲ. ಅವರು ತಮ್ಮ ಪಾಡಿಗೆ ತಾವಿರುತ್ತಾರೆ. ಅವರನ್ನು ತಮ್ಮ ಸ್ವಾರ್ಥ ಪ್ರಯೋಜನಕ್ಕಾಗಿ ಬೆನ್ನಟ್ಟುವ ಸಾಮಾನ್ಯಜನರ ಕಾಟ ತಪ್ಪಿಸಿಕೊಳ್ಳಲು ಏನೋ ತಮಗೆ ತೋಚಿದ ಒಳ್ಳೆಯದನ್ನು ಮಾಡಿರಬಹುದು. ಒಳ್ಳೆಯದು ಆದವರು ಅದಕ್ಕೆ ರೆಕ್ಕೆಪುಕ್ಕೆ ಹಚ್ಚಿ ಹೇಳತೊಡಗಿಪರು. ಹಾಗೆಯೇ ಸಾಧಕರು ನೀಡಿದ ಶಾಪಗಳೂ ಸಹ. ವೀರಬ್ರಹ್ಮಯ್ಯನವರ ಜೀವನ ಚರಿತ್ರೆಯಲ್ಲಿ ಇಂತಹ ಒಂದೆರಡು ನಿದರ್ಶನಗಳು ಬರುತ್ತವೆ. ಒಮ್ಮೆ ಇವರು ವಿಭೂತಿ ಹಚ್ಚಿಕೊಂಡು ಹೋಗುತ್ತಿರುವಾಗ ಒಬ್ಬ ಸಾಹೇಬ ಅದನ್ನು ಅಳಿಸಿಬಿಡುತ್ತಾನೆ. ಅವನನ್ನು ತೀಕ್ಷ್ಣವಾಗಿ ನೋಡಿದಾಗ ಅವನು ಸುಟ್ಟು ಭಸ್ಮವಾಗಿ ಹೋಗುತ್ತಾನೆ. ವೀರಬ್ರಹ್ಮಯ್ಯ ಪುಷ್ಪಗಿರಿ ಅಗ್ರಹಾರಕ್ಕೆ ಹೋದಾಗ ಅಲ್ಲಿನ ಬ್ರಾಹ್ಮಣರು "ನೀನು ಒಬ್ಬ ಪಿಂಜಾರದವನಿಗೆ ಬ್ರಹ್ಮಜ್ಞಾನವನ್ನು ಉಪದೇಶಿಸಿದ್ದಿಯಾ, ನೀನಂತೂ ಬ್ರಾಹ್ಮಣನೇ ಅಲ್ಲ" ಮುಂತಾಗಿ ಹೀಯಾಳಿಸಿದಾಗ ವೀರಬ್ರಹ್ಮಯ್ಯ ಅವರಿಗೆ ಹಲವಾರು ರೀತಿಯಲ್ಲಿ ಉತ್ತರಿಸಿ ತನ್ನ ಮಾರ್ಗವನ್ನು ಸಮರ್ಥಿಸಿಕೊಳ್ಳುತ್ತಾನೆ ಮತ್ತು ಅವರು ಅವಹೇಳನ ಮಾಡಿದಾಗ ಇಡೀ ಪುಷ್ಪಗಿರಿಯನ್ನು ಸುಡುವಂತೆ ಮಾಡುತ್ತಾನೆ—ಈ ಎರಡೂ ಸಂದರ್ಭಗಳಲ್ಲಿ ಅವರು ಸುಟ್ಟಿದ್ದು ದೇಹಗಳನ್ನೆಲ್ಲಾ ಆ ದೇಹದೊಳಗಿನ ಅಜ್ಞಾನವನ್ನು ಎಂಬ ಆಶಯವನ್ನು ಗುರುತಿಸದೆ ಅದನ್ನು ವಾಸ್ತವವೆಂದು, ಪ್ರತೀಕಾರಚರ್ಯೆ ಎಂದು ಭಾವಿಸುವುದಾದರೆ ಅದಕ್ಕಿಂತಲೂ ಘೋರ ಅನ್ಯಾಯ ಮತ್ತೊಂದಿಲ್ಲ. ನಿಜವಾದ ಸಾಧಕನಿಗೆ ಪ್ರತಿಕಾರ, ದ್ವೇಷ, ಅಸೂಯೆಗಳಿರುವುದೇ ಇಲ್ಲ. ಇದಕ್ಕೆ ವೀರಬ್ರಹ್ಮಯ್ಯನವರ ಜೀವನದಿಂದ ಮತ್ತೊಂದು ನಿದರ್ಶನವನ್ನು ನೋಡಬಹುದು. ದೇಶ ಪರ್ಯಟನೆಯ ಸಂದರ್ಭದಲ್ಲಿ ನಂದ್ಯಾಲದ ಸ್ವರ್ಣಕಾರನ ಮನೆಗೆ ಹೋಗಿ ಕುಡಿಯಲು ನೀರು ಕೇಳುತ್ತಾರೆ. ಆಗ ಅವನು ದುರಹಂಕಾರದಿಂದ

ತನ್ನ ಕುಲುಮೆಯಲ್ಲಿ ಕರಗಿಸುತ್ತಿದ್ದ ಲೋಹದ ರಸವನ್ನೇ ಬಗ್ಗಿಸಿ ಕುಡಿಯಲು ಕೊಡುತ್ತಾನೆ. ನಿರ್ವಿಕಾರ ಮನೋಭಾವದಿಂದ ಅದನ್ನು ನೀರೆಂದೇ ಭಾವಿಸಿ ಕುಡಿದುಬಿಡುತ್ತಾರೆ. ಆ ಎರಡು ಸಂದರ್ಭಗಳಲ್ಲಿ ನಂತೆ ಇಲ್ಲಿಯೂ ಅವನನ್ನು ದಹಿಸಿಬಿಡಬಹುದಿತ್ತು. ಇಲ್ಲ; ಹಾಗೆ ಮಾಡಲಿಲ್ಲ. ಹಾಗೆ ಮಾಡದಿರುವುದಕ್ಕೆ ಕಾರಣ ಸ್ವಜನವೆಂಬ ವ್ಯಾಮೋಹವೆ? ಆ ರೀತಿ ಕನಸಿನಲ್ಲಿಯೂ ಭಾವಿಸುವಂತಿಲ್ಲ. ತನ್ನ ಮಕ್ಕಳಿಗಿಂತಲೂ ಹೆಚ್ಚಾಗಿ ಶಿಷ್ಯನಾದ ಸಿದ್ಧಯ್ಯನನ್ನು ಪ್ರೀತಿಸಿದ ನಿರ್ಮೋಹಿ ವೀರಬ್ರಹ್ಮಯ್ಯ. ಆ ಸ್ವರ್ಣಕಾರನ ಅಹಂಕಾರವನ್ನು ಕೇವಲ ತಮ್ಮ ಕೃತಿಯಿಂದ ಅಣಗಿಸಿದ ಸಿದ್ಧಪುರುಷ ವೀರಬ್ರಹ್ಮಯ್ಯ. ಒಮ್ಮೆ ತನ್ನ ಭಕ್ತರೊಂದಿಗೆ ದೇಶಸಂಚಾರಕ್ಕೆ ಹೊರಡುತ್ತಾರೆ. ಮಾರ್ಗ ದಲ್ಲಿ ಕಳ್ಳರ ಕೈಗೆ ಸಿಕ್ಕಿ ತೊಂದರೆಗೊಳಗಾದ ವ್ಯಕ್ತಿ ಎದುರಾಗಿ "ಅಯ್ಯಾ ಈ ದಾರಿಯಲ್ಲಿ ಕಳ್ಳರು ಇದ್ದಾರೆ, ಆದ್ದರಿಂದ ನೀವು ಬೇರೆ ದಾರಿ ಹಿಡಿದು ಹೋಗುವುದು ಲೇಸು" ಎಂದು ಹೇಳುತ್ತಾನೆ. ಆ ಮಾತನ್ನು ಕೇಳಿ ನಕ್ಕು 'ಮನುಷ್ಯ ಹೆದರಬೇಕಾದದ್ದು ಒಳಗಿನ ಕಳ್ಳರಿಗೆ ಹೊರತು ಹೊರಗಿನ ಕಳ್ಳರಿಗಲ್ಲ. ಪಾಪ ನನ್ನಿಂದ ದೋಚುವುದಕ್ಕೆ ನನ್ನ ಬಳಿ ಏನು ತಾನೆ ಇದೆ' ಎಂದು ಮುಂದೆ ಹೋಗುತ್ತಾನೆ. ಒಂಭತ್ತು ಜನ ಕಳ್ಳರು ಬಂದು ಎದುರಾದಾಗ ಶಿಷ್ಯರೆಲ್ಲ ಓಡಿಹೋಗಿ ಬಚ್ಚಿಟ್ಟುಕೊಳ್ಳು ತ್ತಾರೆ. ಆದರೆ ಪಿಂಜಾರರ ಸಿದ್ಧಯ್ಯ ಮಾತ್ರ ಗುರುವಿನ ಬಳಿ ನಿಲ್ಲು ತ್ತಾನೆ. ಕಳ್ಳರು ಇವರನ್ನು ಬಡಿಯಲು ದೊಣ್ಣೆಗಳನ್ನು ಎತ್ತಿದಾಗ ಮನದಲ್ಲಿ ಯಾವ ದುಗುಡವನ್ನು ತೋರದೆ ಶಾಂತಚಿತ್ತನಾಗಿ ಬ್ರಹ್ಮಯ್ಯ ನಿಂತ. ಆಗ ಅವರು ಕಳ್ಳರಾದರೇನು ಮನುಷ್ಯರೇ ಅಲ್ಲವೇ? ಬಡಿ ಯಲು ಕೋಲು ಎತ್ತಿದ ತಕ್ಷಣವೇ ಬೊಬ್ಬೆಯಿಡುವ ಜನರನ್ನು ಕಂಡ ಅವರಿಗೆ ವೀರಬ್ರಹ್ಮಯ್ಯ ವಿಚಿತ್ರವಾಗಿ ಕಂಡು ಅವರೂ ಹಾಗೆಯೇ ನಿಲ್ಲುತ್ತಾರೆ. ಇದನ್ನು ಕಥೆಯಲ್ಲಿ ಅವರು ವೀರಬ್ರಹ್ಮಯ್ಯ ತಪಃಶಕ್ತಿ ಯಿಂದ ಬೊಂಬೆಗಳಾದರು. ಅನಂತರ ಆತನ ಕರುಣೆಯಿಂದಲೇ

ಮನುಷ್ಯರಾದರು. ಅವರು ಎಸಗಿದ ಈ ಘೋರ ಪಾಪಕೃತ್ಯದ ಫಲವಾಗಿ ಅವರ ತಲೆಗಳು ಬಾಗಿಹೋದವು ಎಂಬುದಾಗಿ ಹೇಳಲಾಗಿದೆ. ಈ ಕಥೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ವೀರಬ್ರಹ್ಮಯ್ಯನಿಗೆ ಆ ಕಳ್ಳರ ಬಗ್ಗೆ ಕನಿಷ್ಠ ಸಿಟ್ಟು ಬಂದಂತೆಯೂ ತೋರುವುದಿಲ್ಲ. ಬದಲಾಗಿ ಅವರನ್ನು "ಮಕ್ಕಳೇ ಏಕೆ ಹಾಗೆ ನಿಂತಿರಿ. ನಿಮಗಾಗಿ ನಿಮ್ಮ ಹೆಂಡತಿ ಮಕ್ಕಳು ಕಾದಿರುತ್ತಾರೆ. ನಿಮಗೂ ಊಟದ ವೇಳೆಯಾಯಿತು. ನನ್ನನ್ನು ಬಡಿದು ನಿಮಗೆ ಬೇಕಾದುದನ್ನು ಒಯ್ಯಿರಿ" ಎಂದು ಪ್ರಶಾಂತವಾಗಿ ನುಡಿಯುತ್ತಾನೆ. ಅವರ ಬಾಯಿಂದ ಏನು ಮಾತು ಬಂದಾವು ? ಸಿಗ್ಗಾಗಿ ತಲೆಬಾಗಿಸಿದರು. ತಮ್ಮ ತಪ್ಪಿನ ಅರಿವಾಗಿ, ಅದುವರೆಗಿನ ತಮ್ಮ ಬದುಕಿನ ರೀತಿಗಾಗಿ ಅವರು ಜೀವನದುದ್ದಕ್ಕೂ ತಲೆಬಾಗಬೇಕಾಯಿತು—ಇಂಥ ಮಾನವೀಯ ಘಟನೆಗೆ ನಂತರದ ಕಾಲದಲ್ಲಿ ಮಹಿಮೆಗಳ ಬಣ್ಣ ಹಚ್ಚಿ, ಅಹಿಂಸಾವಾದಿಯಾದ, ದ್ರವ್ಯಸಂಗ್ರಹವನ್ನು ವಿರೋಧಿಸಿದ ಮಾನವತಾಮೂರ್ತಿಯ ಚಿತ್ರವನ್ನು ತಿರುವುಮುರುವು ಮಾಡಲಾಗಿದೆ.

ಇಲ್ಲಿಯೇ ವೀರಬ್ರಹ್ಮಯ್ಯನವರ ಶಿಷ್ಯನಾದ ಸಿದ್ಧಯ್ಯನನ್ನು ಕುರಿತು ಇರುವ ಕಥೆಯನ್ನು ವಿಶ್ಲೇಷಿಸುವುದು ಸೂಕ್ತ. ಸಿದ್ಧಯ್ಯ ಮುಸಲ್ಮಾನರಲ್ಲಿ ಒಂದು ಪಂಗಡವಾದ ಪಿಂಜಾರರ ಕುಲದಲ್ಲಿ ಹುಟ್ಟಿದವನು. ಬಾಲ್ಯದಿಂದಲೂ ವಿರಕ್ತಮನೋಭಾವ ಹೊಂದಿದ್ದ ಈತ ವೀರಬ್ರಹ್ಮಯ್ಯನವರ ಬಳಿ ಶಿಷ್ಯತ್ವ ಪಡೆಯಲು ಬಂದಾಗ ಒಂದೆಡೆ ಮುಸ್ಲಿಮರು ಮತ್ತೊಂದು ಕಡೆ ಸ್ವಜನರು, ಕೊನೆಗೆ ವೀರಬ್ರಹ್ಮಯ್ಯನವರ ಮಕ್ಕಳೂ ಸಹ ಅವನನ್ನು ವಿರೋಧಿಸುತ್ತಾರೆ. ಈ ಯಾವ ವಿರೋಧವನ್ನೂ ಬ್ರಹ್ಮಯ್ಯನವರು ಕಿವಿಯ ಮೇಲೆ ಹಾಕಿಕೊಳ್ಳುವುದೇ ಇಲ್ಲ. ಅವನನ್ನೇ ಶಿಷ್ಯನನ್ನಾಗಿ ಸ್ವೀಕರಿಸುತ್ತಾರೆ. ತಮ್ಮ ಮಕ್ಕಳೇ ಕಮಂಡಲ ಮತ್ತು ಪಾದುಕೆಗಳನ್ನು ಕೇಳಿದಾಗ ನಿರಾಕರಿಸಿದ ಬ್ರಹ್ಮಯ್ಯನವರು ಸಿದ್ಧಯ್ಯ ಕೇಳದಿದ್ದರೂ ಅವುಗಳನ್ನು ಅವನಿಗೆ ಕೊಡುತ್ತಾರೆ.

ವೀರಬ್ರಹ್ಮಯ್ಯನವರ ಸಮಾಧಿಯ ನಂತರ ಅವುಗಳನ್ನು ಅಪಹರಿಸಿ ತಮ್ಮ ಸ್ವಾಧೀನ ಮಾಡಿಕೊಳ್ಳಬೇಕೆಂದು ವೀರಬ್ರಹ್ಮಯ್ಯನವರ ಸಂಬಂಧಿಗಳು ಪ್ರಯತ್ನಿಸಿದಾಗ ಅದು ವಿಫಲವಾಗುತ್ತದೆ. ಹೀಗಾಗಿ "ಗುರುವೆಂದರೆ ಬ್ರಹ್ಮಯ್ಯ, ಶಿಷ್ಯನೆಂದರೆ ಸಿದ್ಧಯ್ಯ" ಎಂಬ ನಾಣ್ನುಡಿಯೇ ಏರ್ಪಟ್ಟಿತು. ಸಿದ್ಧಯ್ಯನನ್ನು ಕೇವಲ 'ಬ್ರಹ್ಮ'ದ ಒಂದು ಅಂಶವಾಗಿಯೇ ವೀರಬ್ರಹ್ಮಯ್ಯ ಕಂಡರೇ ಹೊರತು ಅವನು ಮುಸ್ಲಿಂ ಎಂದಾಗಲೀ ಹಿಂದೂವೆಂದಾಗಲೀ ಕಾಣಲಿಲ್ಲ. ಆದರೆ ನಂತರದ ಭಕ್ತರಿಗೆ ಮುಸ್ಲಿಮನೊಬ್ಬ ಈ ರೀತಿ ಹಿಂದೂಧರ್ಮಕ್ಕೆ ಒಲಿದು ಭಕ್ತನಾದುದಕ್ಕೆ ಕಾರಣವಿರಲೇಬೇಕು–ಎಂಬ ತರ್ಕ ಹೂಡಿ, ಆ ತರ್ಕಕ್ಕೆ ಅನುಗುಣವಾಗಿ ಒಂದು ಕತೆಯನ್ನು ಹೆಣೆದರು. ಅಡವಿಯಲ್ಲಿ ಗೋಹತ್ಯೆ ಮಾಡಿದ ಕಾರಣದಿಂದಾಗಿಯೇ ಭೈರವವರ್ಮ ನಂತರದ ಜನ್ಮದಲ್ಲಿ ಸಿದ್ಧಯ್ಯನಾಗಿ ಮುಸ್ಲಿಮರಲ್ಲಿ ಹುಟ್ಟಿದ ಎಂಬ ಕಥೆಯನ್ನು ಕಟ್ಟಿದರು. ಈ ಕಥೆ ಇನ್ನೂ ಮುಂದುವರೆದು ಈ ಸಿದ್ಧಯ್ಯನೇ ನಂತರದ ಜನ್ಮದಲ್ಲಿ 'ಗಾಂಧಿ'ಯಾಗಿ ಜನಿಸಿದ್ದು. ಗಾಂಧಿ-ಸಿದ್ಧಯ್ಯ ಅಪರಾವತಾರವಾದುದರಿಂದಲೇ ರಾಮ-ರಹೀಮರನ್ನು ಪ್ರಾರ್ಥಿಸಿದ್ದು. ಭೈರವವರ್ಮನು ಕೊಂದ ಹಸುವೇ 'ಗೋಡ್ಸೆ'ಯಾಗಿ ಹುಟ್ಟಿ ಗಾಂಧಿಯನ್ನು ಕೊಲ್ಲುವುದರ ಮೂಲಕ ತನ್ನ ಸೇಡನ್ನು ತೀರಿಸಿಕೊಂಡಿತು ಎಂಬಲ್ಲಿಯವರೆಗೆ ಹೋಗಿದೆ. ವೀರಬ್ರಹ್ಮಯ್ಯ ಮುಸ್ಲಿಮನಿಗೆ ಮಾತ್ರವಲ್ಲ ಅಂದಿನ ಸಮಾಜ ಅಸ್ಪೃಶ್ಯನೆಂದು ಭಾವಿಸಿದ್ದ ಕಕ್ಕಯ್ಯನನ್ನೂ ಶಿಷ್ಯನನ್ನಾಗಿ ಸ್ವೀಕರಿಸಿ ಅವನಿಗೆ ಬ್ರಹ್ಮಜ್ಞಾನವನ್ನು ನೀಡಿ ಉದ್ಧರಿಸಿದನೆಂದು ಕತೆ ಹುಟ್ಟಿದೆ. ಕಕ್ಕಯ್ಯನ ಬಗ್ಗೆ ಈ ತೆರನ ಅವತಾರದ ಕತೆ ಹುಟ್ಟಿಕೊಂಡಿಲ್ಲ. ಏಕೆಂದರೆ ಅವನು ಅಸ್ಪೃಶ್ಯನಾದರೂ ಹಿಂದೂ. ಹಿಂದೂ ಆದವನಿಗೆ ಈ ಭಕ್ತಿಮಾರ್ಗದಲ್ಲಿ ಅನುರಕ್ತಿಯುಂಟಾಗುವುದು ಸಹಜ. ಅವನಿಗಿಂತಲೂ ಹಿಂದಿನ ಅನೇಕ ಅಸ್ಪೃಶ್ಯ ಭಕ್ತರ ನಿದರ್ಶನಗಳು ಜನರ

ಮುಂದಿದ್ದವು. ಹೀಗಾಗಿ ಕಕ್ಕಯ್ಯನ ಬಗ್ಗೆ ಕಥೆ ಮೂಡದೆ ಮುಸ್ಲಿಮ ನಾದ ಸಿದ್ಧಯ್ಯನ ಬಗ್ಗೆ ಮಾತ್ರ ಕತೆ ಹುಟ್ಟಿಕೊಂಡಿತು.

ಹನ್ನೆರಡನೆಯ ವಯಸ್ಸಿನಲ್ಲಿ ಮನೆ ಬಿಟ್ಟು ದೇಶಾಂತರಿಯಾಗಿ ತಿರುಗುತ್ತಾ ಬ್ರಹ್ಮಯ್ಯ ಬನಗಾನಪಲ್ಲಿ ಎಂಬ ಹಳ್ಳಿಯಲ್ಲಿ ರೆಡ್ಡಿಯ ಮನೆಯಲ್ಲಿ ದನಗಾಹಿಯಾಗಿ ನಿಂತರು. ದನಗಳನ್ನು ಕಾಯುವುದನ್ನು ಒಂದು ನೆವ ಮಾಡಿಕೊಂಡು ತನ್ನ ಮೂಲೋದ್ದೇಶವಾದ ಸತ್ಯಾನ್ವೇಷಣೆ ಯನ್ನು ಸಾಗಿಸುತ್ತಿದ್ದ. ಈತನು ಸಾಮಾನ್ಯ ದನಗಾಹಿಯಲ್ಲ; ಒಬ್ಬ ಸಾಧಕನೆಂಬುದನ್ನು ಗರಿಮೇರೆಡ್ಡಿ ಅಚ್ಚಮ್ಮನವರು ಗುರುತಿಸಿದರು. ಆಕೆಗೆ ಕಾಲಜ್ಞಾನವನ್ನು ಹೇಳಿ ಬ್ರಹ್ಮಜ್ಞಾನವನ್ನು ಬೋಧಿಸುತ್ತಾನೆ. ಸ್ತ್ರೀಯರಿಗೆ ಜ್ಞಾನಬೋಧನೆಯನ್ನು ಮಾಡಿದವರಲ್ಲಿ ವೀರಬ್ರಹ್ಮಯ್ಯ ಮೊದಲಿಗರು. ತಾವು ಸಮಾಧಿಯನ್ನು ಹೊಂದಿದ ಮೇಲೂ ತಮ್ಮ ಹೆಂಡತಿ ಅರಿಶಿನ ಕುಂಕುಮವನ್ನೇ ತೆಗೆಯಬಾರದೆಂದು ವೀರಯ್ಯ ಮೊದಲೇ ತಿಳಿಸಿರುತ್ತಾರೆ. ಈ ತೆರನ ಹಲವಾರು ಸುಧಾರಣೆಗಳನ್ನು ತುಂಬ ಸಹಜವೆನ್ನುವಂತೆ ತಾನೇ ಮೊದಲು ಮಾಡಿ ತೋರಿಸಿದ್ದಾನೆ. ಬನಗಾನಪಲ್ಲಿಯಿಂದ ಹೊರಟು ಕಂದಿಮಲ್ಲಯ್ಯಪಲ್ಲಿ ಎಂಬಲ್ಲಿಗೆ ಬಂದು ತನ್ನ ಕುಲವೃತ್ತಿಯಾದ ಸ್ವರ್ಣಕಾರಿಕೆಯನ್ನು ಮಾಡುತ್ತಾ ನಿಲ್ಲುತ್ತಾನೆ. ಆಗ ಊರಿನವರು ಬಂದು ಗ್ರಾಮದೇವತೆಯ ಹಬ್ಬಕ್ಕಾಗಿ ವೀರಯ್ಯ ನನ್ನೇ ವಂತಿಕೆಯನ್ನು ಕೇಳುತ್ತಾರೆ. ಈ ತೆರನ ಮೂಢಾಚಾರಗಳನ್ನು ವಿರೋಧಿಸುವ ಪ್ರವೃತ್ತಿಯವನಾದ ವೀರಯ್ಯ ಅವರಿಗೆ ವಂತಿಕೆಯನ್ನು ನೀಡಲು ನಿರಾಕರಿಸುತ್ತಾನೆ. ಅಷ್ಟೇ ಅಲ್ಲ ಅವರು ಯಾರನ್ನು ಗ್ರಾಮ ದೇವತೆ ಎಂದು ಆರಾಧಿಸುತ್ತಾರೆಯೋ ಆಕೆಯಿಂದಲೇ ಗ್ರಾಮದ ಮುನಸೀಫನಿಗೆ ಚುಟ್ಟಾ ಸೇದಲು ಬೆಂಕಿಯನ್ನು ತರಿಸಿ ತನ್ನ ಪವಾಡ ವನ್ನು ಮೆರೆದನೆಂಬ ದಂತ ಕಥೆಯೂ ಇದೆ.

ಕಂದಿಮಲ್ಲಯ್ಯಪಲ್ಲಿಯಿಂದ ಹೊರಟು ಪೆದ್ದಕೊಮರ್ಲ ಎಂಬ ಗ್ರಾಮದ ಶಿವಾಲಯದಲ್ಲಿ ತಪಸ್ಸಿಗೆ ಕುಳಿತರು. ಅಲ್ಲಿರುವಾಗಲೇ

ಆ ಗ್ರಾಮದ ಶಿವಕೋಟಯ್ಯ ಎಂಬುವವರ ಮಗಳಾದ ಗೋವಿಂದಮ್ಮ ನನ್ನು ಮದುವೆಯಾದರು. ಮದುವೆಯಾದ ಮೇಲೆ ಹೆಂಡತಿಯೊಂದಿಗೆ ತೀರ್ಥಯಾತ್ರೆಯನ್ನು ಮುಗಿಸಿ ಮತ್ತೆ ಕಂದಿಮಲ್ಲಯ್ಯಪಲ್ಲಿಗೆ ಬಂದು, ತನ್ನ ಕುಲವೃತ್ತಿಯನ್ನು ಮಾಡುತ್ತಾ ಸಂಸಾರದಲ್ಲಿದ್ದು ರಾಜಯೋಗ ದಲ್ಲಿ ಸಾಧನೆಯನ್ನೂ ಬೋಧನೆಯನ್ನೂ ಮುಂದುವರಿಸಿದರು. ಇವರಿಗೆ ಆರು ಜನ ಮಕ್ಕಳು. ಗೋವಿಂದಯ್ಯ, ಶಿವರಾಮಯ್ಯ, ಪೋತ ಲೂರಯ್ಯ, ಓಂಕಾರಯ್ಯ ಮತ್ತು ಸಿದ್ಧಲಿಂಗಯ್ಯ ಎಂಬ ಗಂಡು ಮಕ್ಕಳೂ ವೀರನಾರಾಯಣಮ್ಮ ಎಂಬ ಹೆಣ್ಣು ಮಗಳು. ಕೊನೆಯ ಮಗನಾದ ಸಿದ್ಧಲಿಂಗಯ್ಯನನ್ನು ವೀರಯ್ಯ ತನ್ನ ಮಾವನವರಾದ ಶಿವ ಕೋಟಯ್ಯನವರಿಗೆ ಸಾಕಿಕೊಳ್ಳಲು ಕೊಟ್ಟು, ಉಳಿದ ಮಕ್ಕಳನ್ನು ತಾವೇ ಬೆಳೆಸಿ ಅವರೆಲ್ಲರಿಗೂ ವಿವಾಹಾದಿ ಎಲ್ಲಾ ಸಂಸ್ಕಾರಗಳನ್ನು ಮಾಡಿ ತಮ್ಮ ಜವಾಬ್ದಾರಿಯನ್ನು ಮುಗಿಸಿದರು.

ವೀರಬ್ರಹ್ಮಯ್ಯನವರ ಜೀವನದೊಂದಿಗೆ ಬೆಸೆದುಕೊಂಡಿರುವ ಸಿದ್ಧಯ್ಯ ಇದೇ ಅವಧಿಯಲ್ಲಿ ಬ್ರಹ್ಮಯ್ಯನವರ ಬಳಿಗೆ ಬಂದದ್ದು. ಕಂದಿಮಲ್ಲಯ್ಯಪಲ್ಲಿ ಗ್ರಾಮಕ್ಕೆ ಸಮೀಪದಲ್ಲಿದ್ದ ಮುಡುಮಾಲ ಎಂಬ ಗ್ರಾಮದಲ್ಲಿ ವಾಸವಾಗಿದ್ದ ಪಿಂಜಾರರ ಪೀರುಸಾಹೇಬ ಮತ್ತು ಆದಂಬಿ ಯವರ ಏಕಮಾತ್ರ ಪುತ್ರ ಸಿದ್ಧಯ್ಯ. ತನ್ನ ಮನೆ ಮಠವನ್ನು ಬಿಟ್ಟು ಬ್ರಹ್ಮಯ್ಯನವರನ್ನು ಆಶ್ರಯಿಸಿ ಬಂದ. ವೀರಬ್ರಹ್ಮಯ್ಯನವರ ಮಕ್ಕಳಾದಿಯಾಗಿ ಎಲ್ಲರೂ ವಿರೋಧಿಸಿದರೂ ತನ್ನ ಗುರು ತನ್ನನ್ನು ಶಿಷ್ಯನಾಗಿ ಸ್ವೀಕರಿಸಿದ್ದಾರೆ ಎಂಬ ದೃಢವಾದ ನಂಬಿಕೆಯಿಂದ ಹನ್ನೆರಡು ವರ್ಷ ಅವರ ಶಿಷ್ಯತ್ವ ಮಾಡಿದ. ವೀರಬ್ರಹ್ಮಯ್ಯನವರೊಡ್ಡಿದ ಹತ್ತು ಹಲವಾರು ಪರೀಕ್ಷೆಗಳಲ್ಲಿ ಗೆದ್ದವನು ಸಿದ್ಧಯ್ಯ. ತಮಗಿಂತಲೂ ಸಿದ್ಧಯ್ಯನೇ ತಮ್ಮ ತಂದೆಗೆ ಪ್ರಿಯನಾದನೆಂಬ ಅಸೂಯೆ ವೀರ ಬ್ರಹ್ಮಯ್ಯನವರ ಮಕ್ಕಳಲ್ಲಿ ಇದ್ದೇ ಇತ್ತು. ಅವರು ಸಾಮಾನ್ಯ ಮಾನವರು, ಅದು ಅವರ ದೌರ್ಬಲ್ಯ ಎಂಬ ಅಂಶವನ್ನು ಗುರು

ಶಿಷ್ಯರಿಬ್ಬರೂ ಅರಿತಿದ್ದರು. ವೀರಬ್ರಹ್ಮಯ್ಯನವರು ಸಮಾಧಿಯಾಗುವ ಸಮಯಕ್ಕೆ ಸರಿಯಾಗಿ ಸಿದ್ಧಯ್ಯ ಹತ್ತಿರವಲ್ಲಿಲ್ಲದಂತೆ ನೋಡಿಕೊಂಡರು. ಸಮಾಧಿಯಾಗುವ ಮುನ್ನ ವೀರಬ್ರಹ್ಮಯ್ಯನವರ ಮಕ್ಕಳು ತಮ್ಮ ತಂದೆಯವರ ಯೋಗದಂಡ ಮತ್ತು ಪಾದುಕೆಗಳನ್ನು ಕೇಳಿದಾಗ, "ಅದು ಸಿದ್ಧಯ್ಯನ ಸ್ವತ್ತು" ಎಂದಷ್ಟೇ ಹೇಳಿ ಮರು ಮಾತಾಡದಂತೆ ತಡೆದರು. ಸಿದ್ಧಯ್ಯ ಗುರುಪೂಜೆಗೆ ಹೂ ತರಲು ಹೋದಾಗ ವೀರಬ್ರಹ್ಮಯ್ಯನವರು ಸಮಾಧಿಯನ್ನು ಪ್ರವೇಶಿಸಿದರು. ವಿಷಯ ತಿಳಿದು ಸಿದ್ಧಯ್ಯ ಗುರುಮನೆಗೆ ಬಂದಾಗ ಅವನಿಗೆ ಆ ಮನೆಯ ಬಾಗಿಲು ಮುಚ್ಚಿತ್ತು. ಒಳಗಡೆಯಿಂದ ಬಂದ ಸೇವಕ, ಗುರುಗಳು ಸಮಾಧಿಯಾಗಿರುವುದರಿಂದ ಇನ್ನು ನಿನಗೆ ಇಲ್ಲಿ ಕೆಲಸವಿಲ್ಲ ತಿರುಗಿ ಹೋಗೆಂದು ನಿರ್ದಯವಾಗಿ ಹೇಳಿಬಿಡುತ್ತಾರೆ. ತನ್ನ ಗುರುವಿನ ಸಮಾಧಿಯನ್ನು ನೋಡಿಯೇ ಹೋಗಬೇಕೆಂಬ ಹಂಬಲದಿಂದ ಆ ಮನೆಯ ಮುಂದೆ ಶಿರ್ಷಾಸನವನ್ನು ಹಾಕಿ ನಿಲ್ಲುತ್ತಾನೆ. ಈ ವಿಷಯವನ್ನು ತಿಳಿದ ವೀರಬ್ರಹ್ಮಯ್ಯನವರ ಹೆಂಡತಿ ಗೋವಿಂದಮಾಂಬ ಸಮಾಧಿಯನ್ನು ನೋಡುವುದಕ್ಕೆ ಅನುಮತಿ ನೀಡುತ್ತಾರೆ. ತನ್ನ ಶಿಷ್ಯನ ಆರ್ತನಾದವನ್ನು ಕೇಳಿದ ಬ್ರಹ್ಮಯ್ಯನವರು ಸಮಾಧಿಯಿಂದ ಎದ್ದುಬಂದು, ಶಿಷ್ಯನಿಗೆ ದರ್ಶನವಿತ್ತು ತನ್ನ ಪಾದುಕೆಗಳು, ಯೋಗ ದಂಡ, ಶಿಖಾಮುದ್ರಿಕೆಯನ್ನಿತ್ತು, ಸಿದ್ಧಯ್ಯನಿಗೆ ದಿವ್ಯದೃಷ್ಟಿಯನ್ನಿತ್ತು, ಮದುವೆಯಾಗಿ ಮುಂದಿನ ಜೀವನವನ್ನು ಕಳೆಯುವಂತೆ ಹೇಳಿ, ಹಲವಾರು ವೇದಾಂತ ರಹಸ್ಯಗಳನ್ನು ಬೋಧಿಸುತ್ತಾರೆ. ಸಿದ್ಧಯ್ಯ ಗುರುಗಳ ಪಾದುಕೆಗಳು, ಯೋಗದಂಡ, ಶಿಖಾ ಮುದ್ರಿಕೆಗಳನ್ನು ಕೊಂಡೊಯ್ಯುತ್ತಿರುವುದನ್ನು ಸಹಿಸದ ಬ್ರಹ್ಮಯ್ಯನವರ ಹೆಂಡತಿ ಮತ್ತು ಮಕ್ಕಳು ಅವುಗಳನ್ನು ಕಳ್ಳತನದಲ್ಲಿ ಪಡೆಯಲು ಪ್ರಯತ್ನಿಸಿ ವಿಫಲರಾಗುತ್ತಾರೆ.

ತನ್ನ ಗಂಡನ ಆದೇಶದಂತೆ ಗೋವಿಂದಮಾಂಬ ಮುತ್ತೈದೆ ಲಕ್ಷಣಗಳನ್ನು ವೀರಬ್ರಹ್ಮಯ್ಯ ಸಮಾಧಿಯಾದ ನಂತರವೂ ಹೊಂದಿರುವುದನ್ನು ಅವರ ಕುಲಸ್ಥರಾದ ವಿಶ್ವಕರ್ಮರು ಆಕ್ಷೇಪಿಸುತ್ತಾರೆ. ಈ ಅವಹೇಳನದಿಂದ ನೊಂದ ಪೋತಲೂರಯ್ಯ ತನ್ನ ತಾಯಿಯನ್ನು ಕುರಿತು "ನೀನು ನಿನ್ನ ಮುತ್ತೈದೆ ಚಿಹ್ನೆಗಳನ್ನು ಕಳಚಿಬಿಡು" ಎಂದಾಗ ಗೋವಿಂದಮಾಂಬ "ನನ್ನ ಗಂಡ ಸತ್ತಿಲ್ಲವಾದ್ದ ಕಾರಣ ನಾನು ತೆಗೆಯುವುದಿಲ್ಲ"ವೆಂದು ದೃಢವಾಗಿ ಹೇಳಿಬಿಡುತ್ತಾಳೆ. ಪೋತಲೂರಯ್ಯ ಆ ಮಾತನ್ನು ನಂಬದೆ ತಾನೇ ಸಮಾಧಿಯನ್ನು ಕೆಡಹಿ ಒಳಗಿರುವ ತನ್ನ ತಂದೆಯನ್ನು ಮಾತಾಡಿಸುವ ಪ್ರಯತ್ನ ಮಾಡಿದಾಗ, ತನ್ನ ತಪಸ್ಸಿಗೆ ಭಂಗವಾಯಿತೆಂದು ಕೋಪಗೊಂಡು ಈ ಪಾಪ ಪರಿಹಾರಕ್ಕಾಗಿ ಹನ್ನೆರಡು ವರ್ಷ ವನವಾಸ ಅನುಭವಿಸುವಂತೆ ಶಪಿಸುತ್ತಾನೆ. ತನ್ನ ಪ್ರಿಯ ಶಿಷ್ಯನೂ, ಅನ್ಯಮತೀಯನೂ ಆದ ಸಿದ್ಧಯ್ಯ ಭಕ್ತಿಯಿಂದ ಕರೆದಾಗ ತಪವನ್ನು ಬಿಟ್ಟು ಹೊರಬಂದ ವೀರಬ್ರಹ್ಮಯ್ಯ, ಸ್ವತಃ ತನ್ನ ಹೊಟ್ಟೆಯಲ್ಲಿ ಹುಟ್ಟಿದ ಮಗನು ತನ್ನನ್ನು ಸಮಾಧಿಯಿಂದ ಎಬ್ಬಿಸಿದಾಗ ಶಪಿಸುತ್ತಾನೆ.

ಜನ ಇಂದಿಗೂ ವೀರಬ್ರಹ್ಮಯ್ಯನವರು ಸಜೀವ ಸಮಾಧಿಯಲ್ಲಿದ್ದು ಈ ಕಲಿಯುಗದಲ್ಲಿ ವೀರಭೋಗ ವಸಂತರಾಯನಾಗಿ ಹುಟ್ಟುವುದಾಗಿ ನಂಬಿದ್ದಾರೆ.

ಅಧ್ಯಾಯ–೫

ವೀರಬ್ರಹ್ಮಯ್ಯನವರ ಸಾಹಿತ್ಯ

ವೀರಬ್ರಹ್ಮಯ್ಯನವರು ಸಾಹಿತ್ಯ ಸೃಷ್ಟಿಯ ಕಡೆಗಿಂತಲೂ ಆಧ್ಯಾತ್ಮಿಕ ಸಾಧನೆಯ ಕಡೆಗೆ ಹೆಚ್ಚು ಒಲವಿತ್ತವರು. ತಮ್ಮನ್ನು ಆಶ್ರಯಿಸಿ ಬಂದವರನ್ನು ಆದರಿಸಿ, ಅವರಿಗೆ ಯೋಗಮಾರ್ಗದ ಮೂಲಕ ಮೋಕ್ಷವನ್ನು ಪಡೆಯುವ ಹಾದಿಯನ್ನು ತೋರಿದವರು. ಈ ಯೋಗ ಸಾಧನಾ ಕ್ರಮವನ್ನು ಕುರಿತು ಜನಸಾಮಾನ್ಯರ ಮಾತುಗಳಲ್ಲಿ ಬಳಕೆಯಿರುವ ದೃಷ್ಟಾಂತಗಳನ್ನು, ಉಪಮೆಗಳನ್ನು ಉಪಯೋಗಿಸಿ ತತ್ತ್ವಪದಗಳನ್ನು ಕಟ್ಟಿದರು. ಇವುಗಳ ಸಂಖ್ಯೆಯೂ ಅಂಥಾ ವಿಶೇಷವಾಗಿಲ್ಲ. ಇವರು ವೇಮನನ ಹಾಗೆ ಮಾನವನ ಬದುಕಿನ ಎಲ್ಲ ರಂಗಗಳನ್ನು ಕುರಿತು ವಿಮರ್ಶಿಸಿಲ್ಲ; ವಿಶ್ಲೇಷಿಸಿಲ್ಲ. ಬ್ರಹ್ಮಜ್ಞಾನವನ್ನು ಸಾಧಿಸುವ ಮಾರ್ಗವನ್ನು ತಿಳಿಯಾಗಿ ತೋರಿಸಿದರು. ಒಂದು ದೃಷ್ಟಿಯಿಂದ ಹೇಳುವುದಾದರೆ ವೇಮನನು ತಾತ್ತ್ವಿಕವಾಗಿ ಹೇಳಿದ್ದನ್ನು ವಾಸ್ತವವಾಗಿ ಮಾಡಿ ತೋರಿಸಿದವರು ವೀರಬ್ರಹ್ಮಯ್ಯ. ವೇದಾಂತವೆಂಬುದು ಯಾರ ಸ್ವತ್ತೂ ಅಲ್ಲ; ಯಾರೇ ಬೇಕಾದರೂ ಸಾಧನೆಯಿಂದ ಸಿದ್ಧಿಸಿಕೊಳ್ಳಬಹುದು—ಎಂಬುದನ್ನು ಸಾರಿ ನಿರೂಪಿಸಿದವರು. ಈತನ ರಚನೆಗಳೆಲ್ಲ ಬಹುಪಾಲು ದ್ವಿಪದ ಮತ್ತು ಜೋಲ ಪದಗಳ ಛಂದಸ್ಸಿನಲ್ಲಿದ್ದು ಗ್ರಾಮೀಣ ಜನರು ತಮ್ಮ ಜಾನಪದ ಶೈಲಿಯಲ್ಲಿ ರಾಗವಾಗಿ ಹಾಡಿಕೊಳ್ಳುವಂತೆ ಸರಳವಾಗಿಯೂ ಸುಲಭವಾಗಿಯೂ ಇದೆ.

ವೀರಬ್ರಹ್ಮಯ್ಯನವರ ಸಾಹಿತ್ಯ ಸೃಷ್ಟಿಯನ್ನು ಸರಿಯಾಗಿ, ಸಮರ್ಪಕವಾಗಿ ಸಂಪಾದನೆ ಮಾಡದೆ ಇರುವುದರಿಂದ ಅವರ 'ಕಾಲಜ್ಞಾನ'ವೆಂಬ ಹೆಸರಿಂದಲೇ ಅವರು ಬರೆದ ಗೋವಿಂದ ವಾಕ್ಯಗಳೆಂಬ ತತ್ತ್ವಪದಗಳು, ಸಿದ್ಧಬೋಧ ಕಾಳಿಕಾಂಬ ಶತಕಗಳು, ಕಾಲಜ್ಞಾನವೂ ಸೇರಿಹೋಗಿದೆ. ಹೀಗಾಗಿ 'ಕಾಲಜ್ಞಾನ'ವೆಂಬ ತಾಳೇಗರಿ ಗ್ರಂಥದಲ್ಲಿನ ಬರಹವನ್ನೇ ಯಥಾವತ್ತಾಗಿ ಮುದ್ರಿಸಿದ್ದಾರೆ. ಆದರೆ ವೀರಬ್ರಹ್ಮಯ್ಯನವರ ಸಂಪ್ರದಾಯದಲ್ಲಿ ಇವು ಗೋವಿಂದ ವಾಕ್ಯಗಳು, ಇವು ತತ್ತ್ವಪದಗಳು, ಇದು ಸಿದ್ಧಬೋಧ, ಇದು ಶತಕವೆಂಬುದಾಗಿ ಗುರುತಿಸಲಾಗುತ್ತದೆ. ಅದರಂತೆ ಒಂದೊಂದು ಕೃತಿಯನ್ನೂ ಪರಿಚಯಿಸಲಾಗಿದೆ.

ಕಾಲಜ್ಞಾನದಲ್ಲಿ 'ಸಿದ್ಧಬೋಧಮು' ಎಂಬ ಶೀರ್ಷಿಕೆಯಡಿಯಲ್ಲಿ ಹಲವಾರು ಕಂದ ಪದ್ಯಗಳಿವೆ. ಇವು 'ಸಿದ್ಧಾ' ಎಂಬ ಮಕುಟದಿಂದ ಕೊನೆಯಾಗುತ್ತದೆ. ಇದರಲ್ಲಿ ವೇದಾಂತ ರಹಸ್ಯ ಮತ್ತು ಅವುಗಳ ವಿಮರ್ಶೆಯೂ ಇದೆ. ವೀರಬ್ರಹ್ಮಯ್ಯನವರು ಶಿವಕೇಶವರ ನಡುವೆ ಬೇಧವನ್ನೆಣಿಸಿದವರಲ್ಲ. ಆ ಹಂತವನ್ನು ಮೀರಿದವರು. ಆದರೂ ಭಕ್ತರನ್ನು ಶಿವಕವಿಗಳನ್ನು ಗೌರವಿಸಿದವರು. (ಶಿವಕವಿಗಳು ಎಂದರೆ ತೆಲುಗು ಸಾಹಿತ್ಯದಲ್ಲಿ ಶೈವ-ವೀರಶೈವ ಸಾಹಿತ್ಯ ರಚಿಸಿದವರನ್ನು ಶಿವಕವಿಗಳೆಂದು ಕರೆಯುತ್ತಾರೆ. ಇವರಲ್ಲಿ ಪಾಲ್ಕುರಿಕೆ ಸೋಮನಾಥ ಮುಖ್ಯ.) ಸಿದ್ಧಬೋಧದ ಆರಂಭದಲ್ಲಿ,

ಶ್ರೀಕರಮುಗ ಶಿವಕವುಲಕು। ಪ್ರಾಕಟಮುಗ ಭಕ್ತುಲಕುನು
ಭಾವಜ್ಞುಲಕುನ್
ಲೋಕಮುಲೋನ ವೆಲ್ಗುನಿ। ರಾಕಾರಮುನುಕು ಶರಣು
ಜಾಯುರ ಸಿದ್ಧಾ.

ಶಿವಕವಿಗಳಿಗೆ, ಭಕ್ತರಿಗೆ, ಭಾವಜ್ಞರಿಗೆ ಈ ಲೋಕದಲ್ಲಿ ಬೆಳಗುತ್ತಿರುವ ನಿರಾಕಾರ ಶಕ್ತಿಗೆ ಶರಣೆನ್ನೋ ಸಿದ್ಧ ಎಂಬ ಪ್ರಾರ್ಥನಾ ಪದ್ಯವಿದೆ.

ಈ ಸಿದ್ಧಬೋಧೆಯಲ್ಲಿ ಒಂದು ಕಡೆ

ವೇದಂಬುಲು ಶಾಸ್ತ್ರಂಬುಲು। ವಾದಂಬುಲಕೊರಕೆ ಚದವಿ
ವಸ್ತುವುಗನಿರಾ
ಯೇ ದಾರಿ ತೆಲಿಯಲೇಕಸು। ವಾದಮುಲಕು ದಿರುಗು
ವೊಟ್ಟಿನಥಮುಲು ಸಿದ್ಧಾ.

—ಎಂಬುದಾಗಿ ತೀಕ್ಷ್ಣವಾಗಿ ವಿಮರ್ಶಿಸುತ್ತಾರೆ. ವೇದಶಾಸ್ತ್ರಗಳನ್ನು ಕೇವಲ ತಮ್ಮ ಪಾಂಡಿತ್ಯ ಪ್ರದರ್ಶನಕ್ಕೆ, ವಾದ ಮಾಡಲಿಕ್ಕಾಗಿ ಓದುವವರು ಬ್ರಹ್ಮನನ್ನು ಹೇಗೆ ಅರಿತಾರು. ಆ ವೇದಶಾಸ್ತ್ರಗಳ ಮೂಲೋದ್ದೇಶವನ್ನು ಅರಿಯದವರು ಪಂಡಿತರಾದರೂ ಅವರು ಅಧಮರೇ. ವೀರಬ್ರಹ್ಮಯ್ಯ ಸೈದ್ಧಾಂತಿಕ ಅರಿವಿಗಿಂತಲೂ, ಸಿದ್ಧಾಂತದ ಅನುಷ್ಠಾನದ ಕಡೆಗೆ ಒಲವು ಹೊಂದಿದವರು. ಅನುಷ್ಠಾನ ಸಿದ್ಧಾಂತವನ್ನು ಒರೆಗೆ ಹಚ್ಚುವ ಒರೆಗಲ್ಲು. ಆದ್ದರಿಂದಲೇ ಯಾವ ಶಾಸ್ತ್ರಗಳನ್ನೂ ಅರಿಯದವರಿಂದಲೂ ಅನುಷ್ಠಾನ ಮಾಡಿಸಿ ಕಾರ್ಯತಃ ತೋರಿಸಿದವರು ಬ್ರಹ್ಮಯ್ಯ.

"ಅಂತಾ ಬ್ರಹ್ಮಮಯಂಬನಿ। ಸಂತಸಮುನ ದಿರುವಾರು
ಸರ್ವಜ್ಞುಲು ಶ್ರೀ
ಕಾಂತುನಿ ಕೃಪಚೇವಾರಿಕಿ। ಚಿಂತಲು ಲೇವಯ್ಯಾ
ಯೋಗಸಿದ್ಧುಲು ಸಿದ್ಧಾ.

ಈ ಲೋಕವೆಲ್ಲವೂ ಬ್ರಹ್ಮಮಯವೇ ಎಂದು ಯಾವ ತಾರತಮ್ಯವನ್ನೂ ಕಾಣದೆ ವ್ಯವಹಿಸುವವರೇ ಸರ್ವಜ್ಞರು. ಶ್ರೀಹರಿಯ ಕೃಪೆಯಿಂದ ಅವರಿಗಾವ ಚಿಂತೆಗಳೂ ಇಲ್ಲ. ಅವರೇ ಯೋಗಸಿದ್ಧರು—ಎಂಬುದಾಗಿ ಯೋಗಿಗಳ, ಸರ್ವಜ್ಞರ ಲಕ್ಷಣವನ್ನು ತಿಳಿಸುತ್ತಾನೆ. ಎಲ್ಲವೂ ಬ್ರಹ್ಮಮಯವೆಂದು ಭಾವಿಸುವುದು ಅಂಥ ಸುಲಭದ ಮಾತಲ್ಲ. ಸಿದ್ಧಾಂತವನ್ನು ಅರಿತಿರಬಹುದು. ಆದರೆ ಅದರ ಅನುಷ್ಠಾನ?

'ಕಾಳಿಕಾಂಬ ಹಂಸ ಕಾಳಿಕಾಂಬ' ಎಂಬ ಮಕುಟವಿರುವ ಸುಮಾರು ಎರಡು ನೂರು ಪದ್ಯಗಳು ಕಾಲದಲ್ಲಿವೆ. ಇವು 'ಸಿದ್ಧಬೋಧಮು' ಹಾಗೆಯೇ ಮುಕ್ತಗಳಾಗಿದ್ದು ಪ್ರತಿಯೊಂದು ಪದ್ಯದಲ್ಲಿಯೂ ಸಮಕಾಲೀನ ಸಮಾಜದ ವಿಮರ್ಶೆ ಮತ್ತು ನಿಜವಾದ ಬ್ರಹ್ಮಜ್ಞಾನ ಬೋಧೆಯನ್ನು ಮಾಡಲಾಗಿದೆ.

ತೀರ್ಥಯಾತ್ರಲಕೆಲ್ಲ ದೇವುಡೊಕ್ಕಡೇಗದಾ। ವುತ್ತಮು
ತೀರ್ಥಂಬುಯೊದ್ದಗಲದು
ದಿವ್ಯತೀರ್ಥಂಬಿದಿಗೋ ದೇಹಮಂದುನ್ನದಿ। ಕಾಳಿಕಾಂಬ
ಹಂಸ ಕಾಳಿಕಾಂಬ

ಎಷ್ಟು ತೀರ್ಥಯಾತ್ರೆಗಳನ್ನು ಮಾಡಿದರೂ ಇರುವವನು ದೇವರು ಒಬ್ಬನೇ. ಎಲ್ಲ ತೀರ್ಥಕ್ಷೇತ್ರಗಳಿಗಿಂತ ಶ್ರೇಷ್ಠವಾದುದು ಹತ್ತಿರದಲ್ಲಿಯೇ ಅದು ನಿನ್ನ ದೇಹದಲ್ಲಿಯೇ ಅಡಗಿದೆ. ಅದನ್ನು ನೀನು ಕಾಣು —ಎಂಬುದಾಗಿ, ಮೂಢಭಕ್ತಿಯಿಂದ ತೀರ್ಥಯಾತ್ರೆ ಮಾಡುವವರನ್ನು ಎಚ್ಚರಿಸಿ, ಮೊದಲು ಮಾನವನು ತನ್ನೊಳಗಿನ ದೇವರನ್ನು ಕಾಣಲು ಉಪದೇಶಿಸುತ್ತಾನೆ.

ಸಾಮಾನ್ಯಜನ ತಮಗೆ ಪುಣ್ಯಪ್ರಾಪ್ತವಾಗುವುದೆಂದು ಹಲವಾರು ಗ್ರಾಮದೇವತೆಗಳನ್ನು ಆರಾಧಿಸುತ್ತಾರೆ. ಅಕೆಯನ್ನು ತೃಪ್ತಿಪಡಿಸಲು ಜೀವಬಲಿಯನ್ನೂ ನೀಡುತ್ತಾರೆ. ಅಂಥವರನ್ನು ಕುರಿತು ಬ್ರಹ್ಮಯ್ಯ—

ಜೀವಿನಿ ಮರ್ದಿಂಚಿ ಜೀವಿಕಿ ವೇಸೆನಾ। ಜೀವದೋಷಂಬುಲು
ಚಿಕ್ಕಬಡುನು
ಜೀವ ಹಿಂಸಚೇತ ಚಿಕ್ಕುನಾ ಮೋಕ್ಷಂಬು। ಕಾಳಿಕಾಂಬ
ಹಂಸ ಕಾಳಿಕಾಂಬ

ಒಂದು ಪ್ರಾಣಿಯನ್ನು ಕೊಂದು ಬಲಿ ನೀಡುವುದರಿಂದ ಜೀವಹತ್ಯಾ ದೋಷ ಉಂಟಾಗುವುದೇ ಹೊರತು ಮೋಕ್ಷ ದೊರೆಯುತ್ತದೆಯೇ

ಎಂಬ ಬ್ರಹ್ಮಯ್ಯನವರ ಈ ಪ್ರಶ್ನೆ ಕೇವಲ ಜನಸಾಮಾನ್ಯರನ್ನು ಕುರಿತದ್ದೇ ಅಲ್ಲ. ಶಕ್ತಿಯುಪಾಸಕರನ್ನು ಕುರಿತದ್ದು. ಕಾಲಜ್ಞಾನದಲ್ಲಿ ಒಂದು ಕಡೆ :

"ಯಲ್ಲಮ್ಮ ಕಂಚೂನು, ಮಲ್ಲಮ್ಮ ಕಂಚೂನು
ಕಲ್ಲು ಮಾಂಸಮು ಚಿಟ್ಟಿಗೂಡಿ ಸೇರುಮಾ
ಕಲ್ಲದೇವತಲನು ಗೋಲಿಚೇಟಿವಾರೆಲ್ಲ
ನಿಲ್ವಪೇರುಲೇಕ ಪೊಯ್ಯೆನಮಾ"

(ಎಲ್ಲಮ್ಮನಿಗೆಂದು. ಮಲ್ಲಮ್ಮನಿಗೆಂದು, ಸುರೆ, ಮಾಂಸವನ್ನು ಅರ್ಪಿಸಿ, ಆ ಹುಸಿದೇವತೆಗಳನ್ನು ಆರಾಧಿಸುವವರು ಹೇಳಹೆಸರಿಲ್ಲದೇ ಹೋದಾರು) —ಎಂದು ಎಚ್ಚರಿಸಿದ್ದಾರೆ.

ಇವುಗಳಲ್ಲದೆ ಬ್ರಹ್ಮಯ್ಯನವರು ಹಲವಾರು ತತ್ತ್ವಪದಗಳನ್ನು ರಚಿಸಿದ್ದಾರೆ. ಸಿದ್ಧಬೋಧಮು, ಕಾಳಿಕಾಂಬ ಹಂಸ ಕಾಳಿಕಾಂಬ ಮುಂತಾದ ಪದ್ಯಗಳಲ್ಲಿನ ವಿಮರ್ಶನಾ ದೃಷ್ಟಿಗಿಂತಲೂ ಯೋಗಕ್ಕೆ ಸಂಬಂಧಿಸಿದಂತೆ ಸಾಧಕನು ಮಾಡಬೇಕಾಗಿರುವ ಸಾಧನಾ ವಿಧಾನಗಳನ್ನು ಕುರಿತು ಹೇಳಿರುವುದನ್ನು ಅಲ್ಲಿ ವಿಶೇಷವಾಗಿ ಗಮನಿಸಬಹುದು. ಅವುಗಳಲ್ಲಿ ಕೆಲವನ್ನು ಇಲ್ಲಿ ನೋಡೋಣ.

ತೀಯ್ಯನಿ ಮಾಮಿಡಿ ಪಂಡು। ತಿನಬೋತೆ ದೊರಕದು
ತೀಪುಲು ಮೆಂಡು
ಪಂಡುಕು ವೃಕ್ಷಮು ಪ್ರಜಲೆವ್ವರೆಗರು। ಪರಮಾತ್ಮುಡನೆ
ಅಕುಪಯಿನುಂಡಗಾ
ಪಂಡು ಕೆನುಬದಿನಾಲ್ಗು। ಪರ್ವಾಮುಲಯಿಯುಂಡು
ಪರಲಕು ನೀಪಂಡು ವಶಮುಕಾದು
॥ ತೀಯ್ಯನಿಮಾಮಿಡಿ ಪಂಡು ॥

ವಿತ್ತುಲೇನಿ ಪಂಡು ವಿಶ್ವಮುಲೊಸುಂಡು ।
ಸತ್ಯಮುಃ ಈ ಮಾಟ ನಿತ್ಯಮಯಾ ॥
ಅತ್ತುಗ ತಲ್ಲಿಕಿ ಬಿಡ್ಡ ಮಗಡೈತೆ ।
ಸತ್ಯಮು ಈ ಮಾಟ ನಿತ್ಯಮು ವಿನಃಡಿ ॥
ಆಲುಃಮಗಲೂ ದುಃಡು ಆದಿಲೇನಿವಾಡು ।
ಕೊಡುಕು ಕೂತುರುಗನ್ನ ಕೊಡುಕೇಡಿರಾ
ಅಲ್ಲುನಿಕಲ್ಲೊಕ ಹರಿಹರಾದುಲಂದು ।
ಮುಲ್ಲೋಕಮುನತಲ್ಲಿ ಮುಗ್ಗುರಿನಿ ಮಿಂಗೆನ್ ॥
ಚೆರುವುಲೋ ದಾವಾನಲ ಜ್ಯೋತುಲ್ಲೈ ಪೊಯ್ಯಾರು ।
ಜನನ ಮರಣ ಮರಣಮುಲೇನಿ ಪಂಡು
ವಾದಮುಃಭೇದಮು ಓಂಕಾರಮ್ಮೈಯುಂಡು ।
ಮಾತಲ್ಲಿ ಮಹಮ್ಮಾಯಿ ಮರ್ಮಮೂಪಂಡು ॥
ಪರಲುಕು ನೀ ಪಂಡು ಒಕ ದಿನುಸುಗಾನುಂಡು ।
ನರಲಕು ನೀ ಪಂಡು ನಮ್ಮಕುಂಡು ॥
ಧರಲೋನಿ ನೀ ಪಂಡು ದಾಸುಲಕೆಯುಂಡು ।
ಪರಮುಗುರುಧ್ಯಾನ ಪರುಲಕು ಪಂಡು ॥

—ಬ್ರಹ್ಮಜ್ಞಾನವನ್ನು ಒಂದು ಮಾವಿನ ಹಣ್ಣಿನೊಂದಿಗೆ ಹೋಲಿಸುತ್ತಾ, ಬ್ರಹ್ಮಜ್ಞಾನ ಎಂಬುದು ಅಷ್ಟು ಸುಲಭವಾಗಿ ದೊರಕುವಂಥದಲ್ಲ. ಒಮ್ಮೆ ದೊರಕಿದರೆ ಅಂತಹ ಸಿಹಿಯಾದ ಹಣ್ಣು ಬೇರೊಂದಿಲ್ಲ ಎಂಬುದಾಗಿ ಹಣ್ಣನ್ನು ಬ್ರಹ್ಮದೊಂದಿಗೆ ಹೋಲಿಸಿ ಆ ಬ್ರಹ್ಮಜ್ಞಾನ ಅರಿಯುವ ಮುನ್ನ ಬ್ರಹ್ಮಜ್ಞಾನದ ಮಹತ್ವವನ್ನು ವಿವರಿಸಿದ್ದಾರೆ.

ಈ ಕೀರ್ತನೆಗಳಲ್ಲಿ ತಪ್ಪು ದಾರಿಯಲ್ಲಿ ನಡೆಯುತ್ತಿರುವ ಸಾಧಕರನ್ನು ಎಚ್ಚರಿಸುವ ಪ್ರವೃತ್ತಿ ವಿಶೇಷವಾಗಿ ಕಂಡುಬರುತ್ತದೆ.

ಮೂಡು ಕಾಲ್ವಲು ದಾಟಲೊರಯ್ಯ ಇಲ ಮೂಢಜನಲು ।
ಮೂಡು ಕಾಲ್ವಲ ದಾಟಲೊರಯ್ಯ
ಮೂಡು ಕಾಲ್ವಲ ತೋನಗೂಡಕ ।
ಇಡಾಪಿಂಗಳ ಮಧ್ಯಮಂಬುನ ।
ಗೂಡಿಪಾಡಿ ಸರಸ್ವತಿನಿ ವಿನನಾಡಿ । ಅವಲ ಮೂಡಲೆಲ್ಲನು
ಓಡಲೇಕನು ನೀದಬೋಯೇರು ಸಂಸಾರ ವಾರಿಧಿ
ಜಾಡತೆಲಿಯಕ ಮುಗಿನಿಗಿ ಪೊಯೇರು
ಮೊಡುಕತೋ ಹರಿನಾಮಮುನುನೊಕಿ ।
ಓಡ ಜೇಸುಕ ಮೂತಿಗಡು ಪ್ರಜು
ನೇಡು ಕೊಂಡಲು ದಾಟಿ ಪೊಗಲಪಾಡು ।
ಎಪ್ಪುಡೋ ನೂಟಿ ಕೊಕ್ಕಡು ॥ ಮೂಡು ॥
ತನ್ನು ತೆಲಿಯಕ ಯುನ್ನವಾರಿತೋ ವಿನ್ನ ।
ಸುಜ್ಞಾನಮುನುದೆಲುಪುಚು
ಕನ್ನುಲಟ್ಟೀ ಮೂಸಿ ಜ್ಯೋತಿನಿ ಕಂಟಿಮನುಚು ।
ತಲ್ಲಡ ಮುಪಲಿಕಿ ದುನ್ನಪ್ರೋತುಲಕೇಮಿ ತೆಲುಸು ?
ಸನ್ಮಾರ್ಗಮಹಿಮನು ವಿನ್ನ ಪ್ರರುಷಲ ಕೇಮಿಗಲ್ಗುನು ?
ತನ್ನು ತಾನು ತೆಲಿಸಿಯುನ್ನ ಸಂಗತಿ ।
ವೇಮನ್ನ ಪದ್ಯಮುಲೋನಿ ಭಾವಮು
ಕನ್ನ ಗುರುವುಲ ಚೇತ ಮರಿತಾ ವಿನನ್ ।
ಪುರುಷುಡು ನೂಟಿಕೊಕ್ಕಡು.
ಗಂಗಾಯುಮುನಾ ಸರಸ್ವತುಲು ।
ಸುಷ್ಮಾಂಗುಚು ಪಾರಂಗನೇರುಲು
ತುಂಗಭದ್ರಾ ಕೃಷ್ಣಾ ಕಾಳಿಂದಿ ಮೊದಲಗು ।
ನದಲ ಲೋಪಲ ಪೊಂಗಿ ಸ್ನಾನಮು ಸೇಯಬೋದರು
ಊರಿಕೆ ಪಟ್ಟೆ ಜಂಗರಾಳ್ಳಕು ಪೂಜ ಚೇಸೇರೇ ।

ಸಂಗತಿಗ ಷಡಂಗಂಬುಲು ಚೆಲಗಿ ಮುದ್ರಿಕ ಪಟ್ಟಿಗಟ್ಟಿ ।
ಸಂಗಮುನ ವರಲಿಂಗಮೆರಗಿನ ಪುಂಗವುಡು ತಾ ನೂಟಿಕೊಕ್ಕಡು.

ಸಾಮಾನ್ಯ ಮಾನವರು ಸತಿ, ಸುತ, ಧನವೆಂಬ ಮೂರು ಮಮಕಾರಗಳಿಂದ ಬಿಡುಗಡೆ ಹೊಂದುವುದು ಕಷ್ಟ. ಇವುಗಳ ಬಗ್ಗೆ ಇರುವ ವ್ಯಾಮೋಹದಿಂದ ಅವುಗಳ ಸುತ್ತೂ ಸುತ್ತಲೇ ಇರುತ್ತಾರೆ. ನಾವೆಯಿಲ್ಲದೆ ಸಂಸಾರ ಸಾಗರವನ್ನು ದಾಟುವ ಪ್ರಯತ್ನಮಾಡಿ, ಜಾಡು ತಿಳಿಯದೆ ಅದರಲ್ಲಿಯೇ ಮುಳುಗಿ ಹೋಗುತ್ತಾರೆ. ಪರಿಣಾಮವೆಂಬ ನಾವೆಯನ್ನು ಹತ್ತಿ ಸಂಸಾರ ಸಾಗರವನ್ನು ದಾಟಿ ಏಳು ಬೆಟ್ಟಗಳನ್ನು ದಾಟಿ ಹೋಗುವವನು ನೂರಕ್ಕೊಬ್ಬನೇ. ತನ್ನನ್ನು ತಾನು ಅರಿಯದವರಿಂದ ಕೇಳದ ಸುಜ್ಞಾನವನ್ನು ಹೇಳುತ್ತಾ, ಕೇವಲ ಕಣ್ಣು ಮುಚ್ಚಿ ಜ್ಯೋತಿಯನ್ನು ಕಂಡೆವೆಂದು ಹುಸಿ ನುಡಿಯುವ ಎಷ್ಟೋ ಕೋಣಗಳಾದ ಹುಸಿ ಸಾಧಕರಿಗೇನು ಗೊತ್ತು? ತನ್ನನ್ನು ತಾನು ಅರಿತವನೂ, ವೇಮನನ ಪದ್ಯಗಳ ಭಾವಗಳನ್ನು ಸಾಕ್ಷಾತ್ಕಾರ ಮಾಡಿಕೊಂಡ ಗುರುಗಳಿಂದ ಜ್ಞಾನಪಡೆಯುವವನು ನೂರಕ್ಕೊಬ್ಬನು. ದೇಹದಲ್ಲಿಯೇ ಗಂಗಾ ಯಮುನಾ ಸರಸ್ವತಿ ನದಿಗಳು ಉಕ್ಕಿ ಹರಿಯುತ್ತಿರಲು ಅದನ್ನು ಬಿಟ್ಟು ಎಲ್ಲಿಯೋ ಇರುವ ನದಿಗಳನ್ನು ಸೇರಿ ಸ್ನಾನ ಮಾಡುತ್ತಾರೆ. ಕೇವಲ ಶಿಲೆಗಳಾಗಿರುವ ದೇವರುಗಳಿಗೆ ಪೂಜಿಸುತ್ತಾರೆ. ಆದರೆ ಅಂಗದೊಳಗಿನ ಪರಲಿಂಗವನ್ನರಿತ ಪುಂಗವನು ನೂರಕ್ಕೊಬ್ಬನೇ. ಆದ್ದರಿಂದಲೇ ಸಾಧಕ ತನ್ನೊಳಗಿನ ಜ್ಯೋತಿಯನ್ನು ನೋಡಬೇಕು.

ಚಿಲ್ಲರ ರಾಳ್ಲಕು ಮ್ರೊಕ್ಕುಚುನುಂಟೆ ।
ಚಿತ್ತಮು ಚೆಡಿಪೋನೊರೆಯೊರೆ
ಚಿತ್ತಮು ನಂದುನ ಚಿನ್ಮಯ ಜ್ಯೋತಿನಿ ।
ಚೊಚುಚುನುಂಡುಟ ಸರೆಸರೆ ॥
ಒಕ್ಕ ಪ್ರೊದ್ದುಲನಿ ಯೊನ್ನಚುನುಂಟೆ ।
ಒನರುಗ ಚೆಡುದುವು ಒರೇಯೋರೆ ॥

ಏಕಮೈನ ಆ ವೈಭವ ಮೂರ್ತಿನಿ ।
ಚೂಚುಚು ನುಂಡುಟ ಸರೇಸರೇ ॥
ನೀಳ್ಳಲೊ ಮೂನಿಗಿ ಗೊನಗುಚುನುಂಟೆ ।
ನಿಲಕಡ ಚೆಡುನುರ ಒರೆಯೋರೆ ॥
ನೀಲೋಸುಂಡೆ ನಿರ್ಮಲ ಜ್ಯೋತಿನಿ ।
ಚೂಚುಚು ಸುಂಡುಟ ಸರೇಸರೇ ॥
ಬಾಧ ಗುರುವುಲ ಪಂಚನು ಚೇರಿತೆ ।
ಭಾವಮು ಚೆಡನುರ ಒರೆಬರೇ ॥
ಬುದ್ಧಿಲೋಸುಂಡೇ ಪೂರ್ಣಮಿ ಚಂದ್ರುನಿ ।
ಚೂಚುಚುನುಂಡುಟ ಸರೇಸರೇ ॥
ವೀರಯ್ಯ ಚೆಪ್ಪಿನ ವಾಕ್ಯನು ನಮ್ಮಿತೇ ।
ವಿವರಮು ತೆಲಿಯುರ ಒರೆಬರೇ ॥
ವಿವರ ಮುಂದುಂಡೇ ವಿಗ್ರಹ ಮೂರ್ತಿನಿ ।
ಚೂಚುಚುನುಂಡುಟ ಸರೇಸರೇ.

ಈ ತತ್ವಪದದಲ್ಲಿ ವಿಗ್ರಹಾರಾಧನೆಯನ್ನು ವೀರಬ್ರಹ್ಮಯ್ಯ ನಿರಾಕರಿಸು ತ್ತಾರೆ. ವಿಗ್ರಹಗಳನ್ನು ಆತ ಚಿಲ್ಲರೆ ಕಲ್ಲುಗಳೆಂದು ಕರೆದಿದ್ದಾರೆ. ಅಂತಹ ಚಿಲ್ಲರೆ ಕಲ್ಲುಗಳನ್ನು ನಂಬುವುದರಿಂದ ಚಿತ್ತವು ಕೆಡುವುದಲ್ಲದೆ ಬೇರಿಲ್ಲ. ನಿನ್ನ ಚಿತ್ತದಲ್ಲಿರುವ ಚಿನ್ಮಯ ಜ್ಯೋತಿಯನ್ನು ನೋಡು. ನಿನ್ನೊಳಗಿನ ವೈಭವಮೂರ್ತಿಯನ್ನು ಕಾಣದೇ ಉಪವಾಸ ಮಾಡುವುದ ರಿಂದ ನಿನ್ನ ದೇಹ ಬಾಡುತ್ತದೆ. ನಿನ್ನೊಳಗಿನ ನಿರ್ಮಲ ಜ್ಯೋತಿ ಯನ್ನು ಕಾಣದೆ ಕೇವಲ ನೀರಲ್ಲಿ ಮುಳುಗುವುದರಿಂದೇನು ? ಪೀಡಿಸುವ ಗುರುಗಳ ಆಶ್ರಯ ಸೇರುವುದರಿಂದ ನಿನ್ನ ಮನಸ್ಸು ಕೆಡುವುದೇ ವಿನಾ ಬೇರಿಲ್ಲ. ನಿನ್ನ ಮನಸ್ಸಿನೊಳಗಿನ ಹುಣ್ಣಿಮೆ ಚಂದ್ರನನ್ನು ಕಾಣು. ವೀರಯ್ಯನ ಈ ಮಾತನ್ನು ನಂಬಿ ಆ ವಿವರಗಳನ್ನು ಅರಿತುಕೋ, ಆ ವಿವರದೊಳಗಿನ ಆನಂದಮೂರ್ತಿಯನ್ನು ಕಾಣು ಎಂಬುದಾಗಿ

ಎಚ್ಚರಿಸುತ್ತಾನೆ. ವೀರಬ್ರಹ್ಮಯ್ಯ ಪ್ರತಿಯೊಂದು ವಿಷಯವನ್ನು ಚಿಕಿತ್ಸಕ ಬುದ್ಧಿಯಿಂದ ನೋಡಿದವರು. ಅವರದು ಭಕ್ತಿಮಾರ್ಗವಲ್ಲ, ಜ್ಞಾನಮಾರ್ಗ. ಜ್ಞಾನಮಾರ್ಗದಲ್ಲಿ ಅರಿವಿಗಿಂತಲೂ ಅರಿವಿನ ಸಾಕ್ಷಾತ್ಕಾರ ಬಹು ಮುಖ್ಯವಾದುದು. ಆದ್ದರಿಂದಲೇ ಒಂದು ತತ್ತ್ವ ಪದದಲ್ಲಿ :

ಪನಿಕಿ ಮಾಲಿನ ಬ್ರಹ್ಮಜ್ಞಾನಮು ।
ಪಲಿಕಿತೇ ಬ್ರಹ್ಮಂ ಬಯ್ಯೋನಾ
ಬೂದಿ ಪೂಯಗಾ ಪೂರ್ವಕಾಲಂಬುನ ।
ಬೂಡಿದ್ಯೆಯೆ ಪುಟ್ಟೇನಾ
ತತ್ತರಪಡಿ ಯೀ ಚದುವುಲು ಚಡಿವಿತೆ ।
ತತ್ವ ವಿಚಾರಂ ಬಯ್ಯೇನಾ
ಉತ್ತಮು ಮ್ಯೆನ ನೂರೇಂಡ್ಲು ದಾಟಿನ ।
ಉತ್ತಮು ಪುರುಷುಂಡಯ್ಯೇನಾ
ಜಾಡೆರುಗಕನು ಜಡಲನು ದಾಲ್ಚಿತೆ ।
ಜನ್ಮರಹಿತಂ ಬಯ್ಯೇನಾ
ನಾಡುನೇಡು ಸೊಕನಾಣ್ಯಮುಲು ಲೋಪಲ ।
ಮೋಡಲ ಕಾಂತಿಯು ಚೇರವಲನ್
ರಂಗುಗ ಗಡ್ಡಮು ಪೆಂಚುಕಯುಂಟೇ ।
ರಾಜಯೋಗಿ ಕಾಬೋಯೆನಾ
ಶೃಂಗಾರಮುನಿ ಪೋತಲೂರಿ । ಸುಬ್ರಹ್ಮಣ್ಯಮುಂನು ಚೇರವಲೆನ್.

ಕೆಲಸಕ್ಕೆ ಬಾರದ ಬ್ರಹ್ಮಜ್ಞಾನವನ್ನು ನುಡಿದ ಮಾತ್ರಕ್ಕೆ ಅದು ಬ್ರಹ್ಮವಾದೀತೇ. ಕೇವಲ ಬೂದಿ ಬಳಿದುಕೊಳ್ಳುವುದರಿಂದ ಏನು ಪ್ರಯೋಜನ. ಓದಿದ ಓದೆಲ್ಲವೂ ತತ್ತ್ವವಿಚಾರವಾದೀತೆ ? ನೂರು ವರ್ಷ ಬದುಕಿದವರೆಲ್ಲಾ ಉತ್ತಮ ಪುರುಷರಾದರೇ ? ಬ್ರಹ್ಮನನ್ನು ಅರಿಯುವ ಮಾರ್ಗವನ್ನು ತಿಳಿಯದೆ ಜಡೆಯನ್ನು ಬಿಟ್ಟರೇನು ಫಲ.

ಗಡ್ಡಬಿಟ್ಟ ಮಾತ್ರಕ್ಕೆ ಯಾರೂ 'ರಾಜಯೋಗಿ'ಯಾಗಲಾರ–ಯಾವು ದನ್ನೂ ಪರೀಕ್ಷಿಸದೇ ಅನುಸರಿಸಲಾರದೆಂದು ತನ್ನ ತತ್ವ ಗೀತೆಗಳಲ್ಲಿ ಮಾತ್ರವಲ್ಲದೆ ಕಾಲಜ್ಞಾನದಲ್ಲಿಯೂ ಈ ತೆರನ ಗೋಮುಖ ವ್ಯಾಘ್ರ ಗಳನ್ನು ಕುರಿತು ಹೇಳುತ್ತಲೇ ಸಾಧಕನಿಗೆ ದಾರಿದೋರಿದ್ದಾರೆ.

ಕಾಲಜ್ಞಾನ :

'ಕಾಲಜ್ಞಾನ'—ಎಂಬುದಕ್ಕೆ ಭವಿಷ್ಯದಲ್ಲಿ ನಡೆಯುವ ಸಂಘಟನೆ ಗಳ ನಿರೂಪಣೆ ಎಂಬ ಸೀಮಿತಾರ್ಥವು ಈಗ ಏರ್ಪಟ್ಟಿದೆ. 'ಕಾಲಜ್ಞಾನ' ಅದು ತ್ರಿಕಾಲಜ್ಞಾನ ಎಂಬ ಅರ್ಥವು ಹಿಂದೆ ಸರಿದಿದೆ. 'ತ್ರಿಕಾಲ ಜ್ಞಾನ'ವೆಂದರೆ ಯಾವುದೇ ವರ್ತಮಾನದ ಸಂಘಟನೆಯ, ವಸ್ತುಸ್ಥಿತಿಯ ಅರಿವು, ಅವುಗಳ ಭೂತ ಮತ್ತು ಭವಿಷ್ಯದ ಪರಿಣಾಮಗಳ ಅರಿವು ಎಂದು ಹೇಳಬಹುದು. ಈ ತೆರನ ತ್ರಿಕಾಲಜ್ಞಾನವಿರುವವನಿಗೆ ಜೀವನ ದಲ್ಲಿ ಯಾವುದೂ ಹೊಸದೂ ಅಲ್ಲ, ಹಳೆಯದೂ ಅಲ್ಲ. ಆದ್ದರಿಂದ ಅವುಗಳಿಂದಾಗಿ ಅವನು ವಿಚಲಿತನಾಗುವುದಿಲ್ಲ. ಇದನ್ನು ಸ್ಥಿತಪ್ರಜ್ಞತೆ ಎಂಬುದಾಗಿ ಕರೆಯಲಾಗಿದೆ. ಈ ತ್ರಿಕಾಲಜ್ಞಾನ ವ್ಯಕ್ತಿಯ ಅಪಾರ ಲೋಕಾನುಭವದಿಂದುಂಟಾಗುವ ದರ್ಶನ. ಈ ದರ್ಶನಗಳೇ ಬಹು ಪಾಲು ಎಲ್ಲ ಸಂಸ್ಕೃತಿಗಳನ್ನು ರೂಪಿಸಿದ್ದು ಎಂದರೆ ತಪ್ಪಾಗಲಾರದು. ಈ ತ್ರಿಕಾಲಜ್ಞರು ಜ್ಯೋತಿಷಿಗಳಲ್ಲ, ಜ್ಯೋತಿಷ್ಯಕ್ಕೂ ಕಾಲಜ್ಞಾನಕ್ಕೂ ಇರುವ ಸಾಮ್ಯತೆಯೆಂದರೆ ಈ ಎರಡೂ ಸಿದ್ಧಾಂತಗಳಲ್ಲಿ ಭವಿಷ್ಯ-ಭೂತ ಗಳ ಊಹೆಯಿರುತ್ತದೆ. ಕಾಲಜ್ಞಾನಿಗಳು ಸಾಮಾನ್ಯವಾಗಿ ತಾವು ಕಂಡದ್ದನ್ನು, ಊಹಿಸಿದ್ದನ್ನು ಬಹಿರಂಗಪಡಿಸುವುದಿಲ್ಲ. ಜ್ಯೋತಿಷಿ ಗಳು ಬಹಿರಂಗ ಪಡಿಸುತ್ತಾರೆ. ಜ್ಯೋತಿಷ್ಯ ಇತರ ಗ್ರಹಗಳಿಗೆ ಭೂಮಿಯ ಮೇಲಿರುವ ಜೀವರಾಶಿಗಳ ಜೀವನದ ಮೇಲೆ ತಮ್ಮ ಪ್ರಭಾವವನ್ನು ಬೀರುವ ಶಕ್ತಿಯಿದೆ ಎಂಬುದಾಗಿ ಭಾವಿಸಿ ಆ ಪರಿಕಲ್ಪ ನೆಯ ಮೇಲೆ ಗ್ರಹಗತಿಗಳನ್ನು ಅನುಸರಿಸಿ ನುಡಿಯುವುದು 'ಭವಿಷ್ಯ'.

ಆದರೆ ಕಾಲಜ್ಞಾನ ಹಾಗಲ್ಲ. ಇದಕ್ಕೆ ಸಂಪೂರ್ಣವಾಗಿ ವ್ಯಕ್ತಿಗತವಾದ ಅನುಭವವೇ ಆಧಾರ. ಒಟ್ಟಿನ ಮೇಲೆ ಇವೆರಡೂ ವಿವಿಧ ನೆಲೆಗಟ್ಟಿನ ಮೇಲೆ ನಿಂತಿರುವ ಊಹಾತ್ಮಕ ವಿಚಾರಧಾರೆಗಳೇ.

ತ್ರಿಕಾಲಜ್ಞಾನವನ್ನು ಹೊಂದಿದವರೆಂದು ಭಾವಿಸಲಾದ ಜನ ಕಾಲಜ್ಞಾನವನ್ನು, ಮುಂದಿನ ಜನರ ಒಳಿತಿಗಾಗಿ ಹೇಳಿದರೆಂದು ದಾಖಲಿಸುವ ಪ್ರವೃತ್ತಿ ಭಾರತದೇಶದಲ್ಲಿನ ಪುರಾಣ ರಚನೆಯ ಅಂತಿಮ ದಿಶೆಯಲ್ಲಿ, ನಡೆದಂತೆ ತೋರುತ್ತದೆ. ಭವಿಷ್ಯದ ಕಾಲಗತಿಯನ್ನು ತಿಳಿಸುವ ಪುರಾಣಗಳಲ್ಲಿ ಭವಿಷ್ಯ ಪುರಾಣ ಮೊದಲಿನದು ನಂತರ ಅದನ್ನು ಅನುಸರಿಸಿ ಭಾರತದ ದೇಶೀಯ ಭಾಷೆಗಳಲ್ಲಿ ಕಾಲಜ್ಞಾನಗಳು ಹುಟ್ಟಿಕೊಂಡವು. ಈ ತೆರನ ಕಾಲಜ್ಞಾನಗಳು ಕೇವಲ ಭಾರತದ ಮಟ್ಟಿಗೆಯಿವೆ ಎಂದು ಭಾವಿಸಲಾಗದು. ಪ್ರಪಂಚದ ಇತರ ಭಾಗಗಳಲ್ಲಿಯೂ ಹುಟ್ಟಿಕೊಂಡಿವೆ. ಹತ್ತನೆಯ ಶತಮಾನದಲ್ಲಿ ಈಬೆನ್ ಖಾಸ್ತ್ರೀ ಎಂಬ ಮಹಮ್ಮದೀಯ ಭವಿಷ್ಯ ದ್ರಷ್ಟಾರ ನಮಗೆ ಕಾಣಸುತ್ತಾನೆ. ಮೈಕೇಲ್ ಡಿ. ನೊಸ್ಟ್ರಡೇಮಸ್ ಎಂಬ ಫ್ರೆಂಚ್ ದೇಶದ ದ್ರಷ್ಟಾರ ಹದಿನಾರನೆಯ ಶತಮಾನದಲ್ಲಿ ಆಗಿಹೋದ. ಈತನು ಬರೆದ 'ಪ್ರಪಂಚದ ಭವಿಷ್ಯ' ಇತ್ತೀಚಿನ ದಿನಗಳಲ್ಲಿ ಅನೇಕರಲ್ಲಿ ಹಲವಾರು ವಿಧದ ಭಯಾಂದೋಳನಗಳನ್ನು ಹುಟ್ಟಿಸಿದೆ.

ಭವಿಷ್ಯ ಪುರಾಣಕ್ಕಿಂತಲೂ ಹಿಂದಿನ ಕೃತಿಗಳಾದ ಭಾರತ-ಭಾಗವತಗಳಲ್ಲಿ ಈ ತೆರನ ಕಾಲಜ್ಞಾನಾಂಶಗಳನ್ನು ಗುರುತಿಸಬಹುದು. ಶ್ರೀಕೃಷ್ಣನ ನಿರ್ಯಾಣದ ನಂತರ ಶುಕ ಮಹಾಮುನಿ ಪರೀಕ್ಷಿತ್ ರಾಜನಿಗೆ ಕಲಿಯುಗದಲ್ಲಿ ಭೂಮಂಡಲವನ್ನು ಪಾಲಿಸುವ ರಾಜರನ್ನು, ಅವರ ದೇಶ-ಕಾಲ ಪರಿಸ್ಥಿತಿಯನ್ನು ವಿವರಿಸುತ್ತಾನೆ. ಹಾಗೆಯೇ ಮಹಾ ಭಾರತದ ಅರಣ್ಯ ಪರ್ವದಲ್ಲಿ ಕಲಿಯುಗದಲ್ಲಿ ವಿಷ್ಣುವು ಕಲ್ಕಿ ಅವತಾರವನ್ನು ತಳೆದು, ಕೃತಯುಗ ಧರ್ಮವನ್ನು ನಿಲ್ಲಿಸುವುದಾಗಿ ವಿವರವಿದೆ.

ಕನ್ನಡ ಮತ್ತು ತೆಲುಗು ಸಾಹಿತ್ಯಗಳನ್ನು ಗಮನದಲ್ಲಿಟ್ಟುಕೊಂಡು ಹೇಳುವುದಾದರೆ ಈ ಕಾಲಜ್ಞಾನಗಳು ಸುಮಾರು ಹದಿನಾರು, ಹದಿನೇಳನೆಯ ಶತಮಾನದಲ್ಲಿ ಹುಟ್ಟಿಕೊಂಡಂತಹವೇ ಆಗಿವೆ. ಈ ಇವು ಯಾರ ಹೆಸರಿನಲ್ಲಿವೆಯೋ ಅವರು ಅವುಗಳನ್ನು ಬರೆದುದಕ್ಕಿಂತಲೂ ಬೇರೆಯವರು ಯಾರೋ ಬರೆದು,ಕಾಲಜ್ಞಾನಕ್ಕೆ ಮಹತ್ತ್ವಬರಬೇಕೆಂಬ ಉದ್ದೇಶದಿಂದ ಅವರ ಹೆಸರನ್ನು ಇಟ್ಟಿರುವಂತೆ ತೋರುತ್ತದೆ. ಮೇಲೆ ಹೇಳಿದ ಅವಧಿಯಲ್ಲಿ ಬದುಕಿ-ಬಾಳಿದ ಕೆಲವು ಸಾಧಕರು ತಾವು ಕಾಲಜ್ಞಾನವನ್ನು ಬರೆದಿರುವುದಾಗಿ ಹೇಳಿಕೊಂಡಿರುವುದೂ ಉಂಟು. ಇಂಥವರರಲ್ಲಿ ಶ್ರೀ ವೀರಬ್ರಹ್ಮಯ್ಯ, ಕೈವಾರದ ನಾರಾಯಣಪ್ಪ, ತಿಂಥಿಣಿಯ ಮೋನಯ್ಯ ಮುಂತಾದವರು ಮುಖ್ಯರು.

ಪ್ರಕಟವಾಗಿರುವ ಇದುವರೆಗಿನ ಕನ್ನಡ ಮತ್ತು ತೆಲುಗು ಕಾಲಜ್ಞಾನಗಳನ್ನು ನೋಡಿದಾಗ ಅವುಗಳ ಸಾಮಾನ್ಯ ಸ್ವರೂಪವನ್ನು ಗುರುತಿಸಬಹುದು. ಪ್ರತಿ ಕಾಲಜ್ಞಾನವೂ ಲೋಕದ ಮಾನವರ ಕಲ್ಯಾಣಕ್ಕಾಗಿಯೋ ನಿರೂಪಿಸಿರುವಂತೆ ಇರುತ್ತವೆ. ಶಿವಶರಣ ಎಮ್ಮೆ ಬಸವಣ್ಣನವರ ಕಾಲಜ್ಞಾನದಲ್ಲಿ ಲೋಕಹಿತಾರ್ಥವಾಗಿ ಲೋಕದ ಮಾನವರಿಗೆ ಅನೇಕಾನೇಕ ಕಾಲಜ್ಞಾನ ಭವಿಷ್ಯಗಳನ್ನು ಎಲ್ಲರೂ ತಿಳಿಯಲೆಂದು ಬರೆಯಲಾಗಿದೆ. ವೀರಬ್ರಹ್ಮಯ್ಯನವರೂ ತಮ್ಮ ಕಾಲಜ್ಞಾನವನ್ನು "ನಾನು ಹೇಳಲಿಲ್ಲ ಎಂದು ನಂತರ ಆಕ್ಷೇಪಿಸಬೇಡಿ, ನನ್ನ ಮಾತು ಸುಳ್ಳಲ್ಲ ಕೇಳಿ" ಎಂದು ಕಾಲಜ್ಞಾನದ ತತ್ವಪದಗಳನ್ನು ಒಂದೆಡೆ ಪ್ರಾರಂಭಿಸುತ್ತಾರೆ.

ಕಾಲಜ್ಞಾನದಲ್ಲಿ ನಡೆದುಹೋದ, ನಡೆಯುತ್ತಿರುವ, ನಡೆಯಲಿರುವ ಸಂಗತಿಗಳನ್ನು ಹೇಳಲಾಗಿರುತ್ತದೆ. ಇವು ಸಾಮಾನ್ಯವಾಗಿ ಜನರ ಧಾರ್ಮಿಕ ನಡುವಳಿಕೆಯ ಬಗ್ಗೆಯೇ ಇರುತ್ತದೆ. ಹಿಂದೆ ಕಾಲ ಚೆನ್ನಾಗಿತ್ತು. ಈಗ ಅದು ಕೆಡುತ್ತಿದೆ. ಮುಂದೆ ಇನ್ನೂ ಕೆಟ್ಟು

ಸರ್ವನಾಶವಾಗುತ್ತದೆ. ಆಗ ತಾವು ನಂಬಿದ ಶಕ್ತಿಯೊಂದು ಉದಯಿಸಿ ತನ್ನ ಭಕ್ತರನ್ನು ಉದ್ಧರಿಸುತ್ತದೆ ಎಂಬುದು ಎಲ್ಲ ಕಾಲಜ್ಞಾನಗಳ ಪ್ರಧಾನ ಆಶಯ. ಈ ಆಶಯದ ನಿರೂಪಣೆಗಾಗಿ ಕಾಲಜ್ಞಾನ ಬರೆದವರು ಹಲವಾರು ಜಾನಪದ ನಂಬಿಕೆ, ಶಕುನ ಮುಂತಾದುವು ಗಳನ್ನು ಬಳಸಿಕೊಂಡಿದ್ದಾರೆ.

ವೀರಬ್ರಹ್ಮಯ್ಯನವರು ಬರೆದದ್ದೆಂದು ಹೇಳುವ ಕಾಲಜ್ಞಾನ, ಹನ್ನೆರಡು ಆಶ್ವಾಸಗಳ ಕೃತಿ ಎಂಬುದಕ್ಕಿಂತಲೂ ಸಂಕಲನವೆಂದು ಹೇಳ ಬಹುದು. ತತ್ವಪದಗಳ, ಪತ್ರಗಳ ಸ್ವರೂಪದಲ್ಲಿ ಕಾಲಜ್ಞಾನವನ್ನು ಬೋಧಿಸಲಾಗಿದೆ. ಕನ್ನಡದ ದಾರ್ಶನಿಕ ಸರ್ವಜ್ಞನ ಕಾಲಜ್ಞಾನವನ್ನೂ ಈ ಸಂಪುಟದಲ್ಲಿ ನಾವು ಕಾಣಬಹುದಾಗಿದೆ. ಕನ್ನಡದಲ್ಲಿ ದೊರೆಯುವ ಕಾಲಜ್ಞಾನಗಳಿಗೂ, ಕರ್ನಾಟಕದವರೇ ಆದ ಕೈವಾರ ನಾರಾಯಣಪ್ಪ ನವರು ಬರೆದ ಕಾಲಜ್ಞಾನಕ್ಕೂ (ಇದು ತೆಲುಗು ಭಾಷೆಯಲ್ಲಿದ್ದರೂ) ಸಾಮ್ಯತೆ ಇದೆ. ಇವುಗಳು ಒಬ್ಬ ಸಾಧಕ ತಾನು ಯೋಗಸಮಾಧಿಯಲ್ಲಿ ಕಂಡ ದರ್ಶನವನ್ನು ಜನರಿಗೆ ಸಾರಿಹೇಳಿದಂತೆ ಇರುತ್ತದೆ. ಆದರೆ ವೀರ ಬ್ರಹ್ಮಯ್ಯನವರ ಕಾಲಜ್ಞಾನ ಪತ್ರವ್ಯವಹಾರ ರೂಪದಲ್ಲಿಯೂ ಇದೆ ಮತ್ತು ಅಲ್ಲಲ್ಲಿ ಸಾಧನೆಯ ಮಾರ್ಗಗಳನ್ನೂ, ವಿಧಾನಗಳನ್ನೂ ವಿವರಿಸ ಲಾಗಿದೆ. ತನ್ನ ಕಾಲಜ್ಞಾನವನ್ನು ತಪ್ಪು ಎಂದು ಹೀಯಾಳಿಸಿದವರಿಗೆ ಉತ್ತರ ರೂಪದಲ್ಲಿ ಬ್ರಹ್ಮಯ್ಯನವರು ವಿವರವಾಗಿ ಬರೆದಂತೆ ಇದೆ. ಕನ್ನಡ ಕಾಲಜ್ಞಾನಗಳಲ್ಲಿಯೂ ಕಾಲಜ್ಞಾನವನ್ನು ಅಲ್ಲಗಳೆದವರು ತೊಂದರೆಗೊಳಗಾಗುತ್ತಾರೆಂಬ 'ಆಶಯ'ವಿದ್ದರೂ ಅಲ್ಲಿ ಈ ರೀತಿ ಪತ್ರವ್ಯವಹಾರವಿರುವುದಿಲ್ಲ. ಕಾಲಜ್ಞಾನದ ಆರನೆಯ ಅಧ್ಯಾಯದಲ್ಲಿ ಮುಂದಿನ ಕಾಲದಲ್ಲಿ ನಡೆಯಲಿರುವ ರಾಜಕೀಯ, ಧಾರ್ಮಿಕ, ಸಾಮಾ ಜಿಕ ಬದಲಾವಣೆಯನ್ನು ಕುರಿತು ಭವಿಷ್ಯ ನುಡಿದಿದ್ದಾರೆ.

ಕಾಲಜ್ಞಾನದ ಸಂಕಲನದ ಎರಡು ಸೌಜನ್ಯ ಪತ್ರಿಕೆಗಳಿದ್ದು ಇತ್ತೀಚೆಗೆ ಅವು ದೊರೆತಿರುವುದು ಗಮನಾರ್ಹವಾದ ಸಂಗತಿ. 'ಸೌಜನ್ಯ ಪತ್ರಿಕೆ' ಎಂಬುದನ್ನು ಸುಜನರ ವ್ಯವಹಾರವೆಂದು ವ್ಯಾಖ್ಯಾನಿಸಲಾಗಿದೆ. ಈ ಪತ್ರಗಳನ್ನು ವೀರಬ್ರಹ್ಮಯ್ಯನವರು ಬರೆದರೆಂದು ಭಾವಿಸಲಾಗಿದೆ. ಈ ಪತ್ರದಲ್ಲಿ, ವೀರಭೋಗ ವಸಂತರಾಯನು ಹುಟ್ಟುವ ಭವಿಷ್ಯದ ಕಾಲಜ್ಞಾನವಿರುತ್ತದೆ. ಈ ಪತ್ರಿಕೆಗೆ ಮುನ್ನ ಮತ್ತು ಕೊನೆಯ ಭಾಗದ ವಿವರಗಳು ಈ ರೀತಿ ಇರುತ್ತದೆ. "ಈ ಪತ್ರಿಕೆಯನ್ನು ನೋಡಿದ ಕೂಡಲೇ ಕಣ್ಣುಗಳಿಗೆ ಒತ್ತಿಕೊಂಡು, ಈ ಪತ್ರಿಕೆಯನ್ನು ತಂದವರನ್ನು ಸಕಲ ಗೌರವಗಳಿಂದ ಗ್ರಾಮದೊಳಕ್ಕೆ ಕರೆದುಕೊಂಡು ಹೋಗಿ, ಆ ಭಕ್ತರಿಗೆ ಅಶನ ವಸನಗಳಿಗೆ ಭತ್ಯೆಯನ್ನು ನೀಡಿ, ಮಠಕ್ಕೆ ಕಾಣಿಕೆಯಿತ್ತು ಮುಂದಿನ ಗ್ರಾಮಗಳಿಗೆ ಮೇಳ ತಾಳಗಳೊಂದಿಗೆ ಮೆರವಣಿಗೆ ಮಾಡಿ ಕೊಂಡು ಕಳಿಸತಕ್ಕದ್ದು." ಎಂದು ಪ್ರಾರಂಭದಲ್ಲಿದ್ದರೆ, ಕೊನೆಯಲ್ಲಿ ಈ ಪತ್ರಿಕೆಯನ್ನು ನೋಡಿ ಅದರ ಪ್ರತಿಯನ್ನು ಸೋಮಾರಿತದಿಂದ ಮಾಡುವರೊ ಅವರು ಕನಕದುರ್ಗಿಯ ಕೋಪಕ್ಕೆ ಗುರಿಯಾಗುತ್ತಾರೆ. ಇದನ್ನು ಪ್ರತಿಮಾಡಿಕೊಂಡು ಪೂಜಿಸಿದವರಿಗೆ ಸಕಲ ವಿಧದಲ್ಲಿಯೂ ಶುಭವಾಗುತ್ತದೆ" ಎಂಬುದಾಗಿರುತ್ತದೆ. ಈ ಎರಡೂ ಪತ್ರಗಳಲ್ಲಿಯೂ ಗೋವಿಂದನಾಮ ತತ್ವಪದಗಳಲ್ಲಿ ಹೇಳಿದ ಕಾಲಜ್ಞಾನದ ಅಂಶಗಳೇ ಇರುತ್ತವೆ.

ವೀರಬ್ರಹ್ಮಯ್ಯನವರ ಜೀವನವನ್ನೂ, ಅವರ ಸಿದ್ಧಾಂತ ಮತ್ತು ಸಾಧನೆಯ ಮಾರ್ಗವನ್ನು ಸೂಕ್ಷ್ಮವಾಗಿ ಪರಿಶೀಲಿಸಿದಾಗ ಈ ಸೌಜನ್ಯ ಪತ್ರಗಳು ಅವರ ಹೆಸರಿನಲ್ಲಿ ನಂತರ ಸೃಷ್ಟಿಯಾದ ಕೂಟ ಪತ್ರಗಳೆಂದು ಹೇಳದೇ ವಿಧಿಯಿಲ್ಲ. ವೀರಬ್ರಹ್ಮಯ್ಯನವರ ನಂತರ ಅವರು ಸಮಾಧಿ ಯಾದ ಜಾಗದಲ್ಲಿ ಮಠವೆದ್ದಿತು. ಮಠವೆಂಬುದು ಸೃಷ್ಟಿಯಾದ ಕೂಡಲೇ ಈ ತೆರನ ಹಲವಾರು 'ಪವಾಡ'ಗಳು ಕೂಟ ಸೃಷ್ಟಿಗಳು ಪ್ರಾರಂಭವಾದುವು. ಕೆಲವರು ಬ್ರಹ್ಮಯ್ಯನವರೇ ಮಠವನ್ನು ಕಟ್ಟಿ,

ತಾವಿರುವಾಗಲೇ ತಮ್ಮ ಹಿರಿಯ ಮಗನಿಗೆ ಅದರ ಪಟ್ಟವನ್ನು ಕಟ್ಟಿದರೆಂದು ಹೇಳುತ್ತಾರೆ. ಆದರೆ ಈ ಅಂಶವು ಚಾರಿತ್ರಿಕವಾಗಿ ಎಷ್ಟರ ಮಟ್ಟಿಗೆ ವಾಸ್ತವವಾದ್ದದ್ದು ಎಂಬುದರ ಪರಿಶೀಲನೆ ಇನ್ನೂ ಆಗಬೇಕಾಗಿದೆ. ವೀರಬ್ರಹ್ಮಯ್ಯ ಒಂದು ರೀತಿಯಲ್ಲಿ ವ್ಯವಸ್ಥೆಯನ್ನು ಅಂಗೀಕರಿಸದೆ, ಅದನ್ನು ವಿರೋಧಿಸಿದವರು. ತಮ್ಮ ತತ್ತ್ವಪದಗಳಲ್ಲಿ ಬಾಧಿಸುವ ಗುರುಗಳ ಬಗ್ಗೆ, ಕಳ್ಳ ರಾಜಯೋಗಿಗಳ ಬಗ್ಗೆ ಜನರನ್ನು ಎಚ್ಚರಿಸಿದವರು. ತಮ್ಮ ಶಿಷ್ಯ ಸಿದ್ಧಯ್ಯ, ತಮ್ಮ ಮಗ ಗೋವಿಂದಯ್ಯನ ಯೋಗ್ಯತೆಯನ್ನು ನಿರ್ವಿಕಾರದಿಂದ ವಿವೇಚಿಸಿ ಗುರುತಿಸಿದವರು. ಅಂತಹವರು 'ಮಠ'ವನ್ನು ಕಟ್ಟಿದರೆಂದರೆ, ಅದಕ್ಕೆ ತಮ್ಮ ಮಗನನ್ನು ಗುರುವಾಗಿ ಪಟ್ಟಾಭಿಷೇಕ ಮಾಡಿದರೆಂದರೆ ನಂಬುವುದು ಕಷ್ಟ.

ದಿನಪತ್ರಿಕೆಗಳಲ್ಲಿ ಯಾವುದೇ ದೊಡ್ಡ ದುರಂತದ, ವಿಚಿತ್ರ ಮಕ್ಕಳ, ಪಶುಗಳ ಬಗ್ಗೆ ವಾರ್ತಾ ಪತ್ರಿಕೆಯಲ್ಲಿ ಓದಿದ ಕೂಡಲೇ ರಾಯಲಸೀಮೆಯ ಜನ "ವೀರಬ್ರಹ್ಮಯ್ಯ ತಾತ ಕಾಲಜ್ಞಾನದಲ್ಲಿ ಹೇಳಿದಂತೆಯೇ ನಡೆಯುತ್ತಿದೆ"—ಎಂದು ಸಹಜವಾಗಿ ಹೇಳಿಬಿಡುತ್ತಾರೆ. ಅವರು ವೀರಬ್ರಹ್ಮಯ್ಯನವರ ಕಾಲಜ್ಞಾನವನ್ನು ಒಮ್ಮೆಯೂ ಓದಿರುವುದಿಲ್ಲ. ಕರ್ಣಾಕರ್ಣಿಯಾಗಿ ಕೇಳಿರುತ್ತಾರೆ. ಅಷ್ಟರಮಟ್ಟಿಗೆ ಆಂಧ್ರದ ಜನಸಾಮಾನ್ಯರ ಮನಸ್ಸಿನಲ್ಲಿ ಐತಿಹ್ಯವಾಗಿದ್ದಾನೆ. ತಮಿಳು ನಾಡಿನ ಎಂ. ಜಿ. ರಾಮಚಂದ್ರನ್ ಮುಖ್ಯಮಂತ್ರಿಯಾದ ಮೇಲೆ ಐದಾರು ವರ್ಷಕ್ಕೆ ಆಂಧ್ರದಲ್ಲಿ ಶ್ರೀ ಎನ್. ಟಿ. ರಾಮರಾಯರು ಮುಖ್ಯಮಂತ್ರಿಯಾದರು. ಇದೇ ಸಮಯದಲ್ಲಿ ಶ್ರೀ ರೇಗನ್ ಅವರು ಅಮೇರಿಕಾದ ಅಧ್ಯಕ್ಷರಾದರು. ಇವರೆಲ್ಲರೂ ಮೂಲಭೂತವಾಗಿ ಚಿತ್ರರಂಗಕ್ಕೆ ಸೇರಿದವರು. ಈ ಕಾಕತಾಳೀಯ ನ್ಯಾಯವನ್ನು ವ್ಯಾಖ್ಯಾನಿಸುವ 'ತೆರಮೀದ ಬೊಮ್ಮಲು ರಾಜ್ಯಮೇಲೀನಿ' (ತೆರೆಯ

ಮೇಲಿನ ಬೊಂಬೆಗಳು ರಾಜ್ಯವನ್ನಾಳುತ್ತವೆ) ಎಂಬ ಬ್ರಹ್ಮಯ್ಯನವರ ಮಾತನ್ನು ಹುಡುಕಿ ತೆಗೆದರು. 'ಮಂಚಿನೀಟಿನು ಜ್ಯೋತಿ ವೆಲಗಾಲಿ ಬ್ರಹ್ಮಂ'—ಎಂಬ ಅವರ ಮಾತು ಶ್ರೀಶೈಲದಲ್ಲಿರುವ ಜಲವಿದ್ಯುತ್ ಸ್ಥಾವರವನ್ನು ಕುರಿತದ್ದು, "ಅವನಿಲೋಗಲ ಬೀದ ಧನವಂತು ಲೊ ಕಟಿಗ, ಅಯ್ಯ ಯೋಗಮು ಕೂಡ ವಚ್ಚೀವಮಾ" ಎಂಬುದು ಕಮ್ಯುನಿಸಂ ಅನ್ನು ಕುರಿತದ್ದು—ಎಂಬ ಕಾಲಜ್ಞಾನದ ಭಾಷ್ಯಗಳು ಹುಟ್ಟಿಕೊಂಡವು. "ಉತ್ತರ ದೇಶದಲ್ಲಿ ಗಾಂಧಿ ಎಂಬ ವ್ಯಕ್ತಿ ಹುಟ್ಟಿ ಕೈಲಿ ರಾಟೆ ಹಿಡಿದು ಭಾರತವನ್ನು ಆಳುತ್ತಾನೆ" ಎಂಬ ಮಾತುಗಳೂ ಸೇರಿಕೊಂಡವು. ಯಾರು ಏನೇ ವ್ಯಾಖ್ಯಾನಿಸಿದರೂ ಪ್ರಕ್ಷಿಪ್ತವಾಡಿ ಹೇಳಿದರೂ ಅದನ್ನು ಬ್ರಹ್ಮ ಹೇಳಿರುತ್ತಾನೆ ಎಂಬ ಭರವಸೆ ಜನಸಾಮಾನ್ಯರಿಗೆ. ಅಷ್ಟರಮಟ್ಟಿಗೆ ಆತನು ಜನರ ನಂಬಿಕೆಗೆ ಪಾತ್ರನಾಗಿದ್ದಾನೆ. ಅವರ ಈ ನಂಬಿಕೆಯನ್ನು ಉಪಯೋಗಿಸಿಕೊಂಡು, ತಮ್ಮ ಬೇಳೆ ಬೇಯಿಸಿಕೊಳ್ಳುವ ಪಂಡಿತರಿಗೆ ಸಾಧುಗಳಿಗೆ ಈ ದೇಶದಲ್ಲಿ ಕೊರತೆಯಿಲ್ಲ. ಇದುವರೆಗೆ ಪ್ರಕಟವಾಗಿರುವ ಕಾಲಜ್ಞಾನಗಳನ್ನು ನೋಡಿದರೆ ಅವುಗಳನ್ನು ಈಗ ಯಾವ ಉದ್ದೇಶ ದಿಂದ ನೋಡಲಾಗುತ್ತಿದೆಯೋ ಅದಕ್ಕಿಂತ ಭಿನ್ನವಾದ ಉದ್ದೇಶದಿಂದ ಬರೆದಂತೆ ತೋರುತ್ತದೆ. ಆ ಪಾರಿಭಾಷಿಕ ಅರ್ಥ ಗ್ರಹಿಕೆಯಾಗದೆ, ಮಾಡಿಕೊಳ್ಳಲು ಆರಿಯದೆ, ಸ್ವಾರ್ಥಕ್ಕಾಗಿ ಅವುಗಳನ್ನು ತಮಗೆ ಸರಿಕಂಡಂತೆ ವ್ಯಾಖ್ಯಾನಿಸುವ ಪ್ರವೃತ್ತಿ ಈ ತೀರಾ ಇತ್ತೀನದು.

ವೀರಬ್ರಹ್ಮಯ್ಯ ಆಂಧ್ರದೇಶ ಕಂಡ ಹಲವಾರು ಸುಧಾರಕರಲ್ಲಿ ಬಹು ಮುಖ್ಯನಾದವನು. ವೈದಿಕ ಸಂಪ್ರದಾಯ ಪ್ರಬಲವಾಗಿರುವ ಇಲ್ಲಿ ಪಾಲ್ಕುರಿಕೆ ಸೋಮನಾಥ ನಂತರ, ಬ್ರಹ್ಮಜ್ಞಾನದ ಅರಿವಿಗೆ ವರ್ಣ ವ್ಯವಸ್ಥೆಯ ಲಿಂಗಭೇದದ ಆತಂಕವಿಲ್ಲವೆಂದು ಸಾರಿಹೇಳಿದವರು. ಆ ದಿಸೆಯಲ್ಲಿ ಸಮಾಜದ ಹಲವು ವರ್ಣಗಳವರನ್ನು ಸಾಧನೆಯಲ್ಲಿ ತೊಡಗಿ ಸಿದವರು. ತಮ್ಮ ಈ ಪ್ರಯತ್ನದ ವಿರುದ್ಧ ಸ್ವಜನರು, ಸಂಪ್ರದಾಯ ವಾದಿಗಳು ವಿರೋಧ ವ್ಯಕ್ತಪಡಿಸಿದಾಗ ಅವುಗಳನ್ನು ಖಂಡಿಸಿ, ತಮ್ಮ

ಸಿದ್ಧಾಂತವನ್ನು ಮೆರೆದವರು. ಇಂದಿಗೂ ಸಮಾಜದ ಕೆಳವರ್ಗದ ಅಧ್ಯಾತ್ಮಿಕ ಆಸಕ್ತಿಯುಳ್ಳವರಿಗೆ ದಾರಿದೀವಿಗೆಯಾಗಿದ್ದಾರೆ. ವೀರ ಬ್ರಹ್ಮಯ್ಯನವರ ಸಮಾಧಿಯ ನಂತರ ಆತನ ಮಠವೇರ್ಪಟ್ಟು; ಆತನ ಬದುಕಿನ ಬಗ್ಗೆ ಹಲವಾರು ಪವಾಡಗಳು ಸೃಷ್ಟಿಯಾಗಿದ್ದು ನಿರ್ಮಲ ಜ್ಯೋತಿಯಾಗಿರುವ ಆತನ ಚಿತ್ರ ಸ್ವಲ್ಪ ಮಸುಕಾಗಿದೆ.

ಆಧಾರ ಗ್ರಂಥಗಳು

ಜನಂಗುಲ ನಾಗಭೂಷಣ ದಾಸು :
ಕಾಲಜ್ಞಾನ ಸಹಿತ ಶ್ರೀ ಶ್ರೀ ಶ್ರೀ ವೀರಬ್ರಹ್ಮೇಂದ್ರ ಸ್ವಾಮುಲವಾರಿ ಸಂಪೂರ್ಣ ಚರಿತ್ರ.

ಪಂಡಿತ ಶ್ರೀ ಏಲೂರಿ ಸೀತಾರಾಮ್ :
ಶ್ರೀ ಪೋತುಲೂರಿ ವೀರಬ್ರಹ್ಮಂಗಾರಿ ಚರಿತ್ರ.

ಗೊಲ್ಲಪೂಡಿ ವೀರಸ್ವಾಮಿ ಸನ್ಸ್ (ಪ್ರಕಾಶಕರು) :
ಕಾಲಜ್ಞಾನ ತತ್ವಮುಲು ಶುದ್ಧಪ್ರತಿ.

ರಾಳ್ಳಪಲ್ಲಿ ಅನಂತಕೃಷ್ಣಶರ್ಮ : ವೇಮನ

ಡಾ॥ ಎನ್. ಗೋಪಿ : ವ್ಯಾಸನವಮಿ.

ಡಾ॥ ಕನ್ನೆಕಂಟಿ ರಾಜಮಲ್ಲಾಚಾರಿ :
ಪೋತುಲೂರಿ ವೀರಬ್ರಹ್ಮಂಗಾರಿ ಜೀವಿತಂ–ರಚನಲ ಪರಿಶೀಲನ.

ಕೃಷ್ಣಮೂರ್ತಿ (ಸಂ.) : ಕಾಲಜ್ಞಾನಂ.

ಕೊಡಾಲ ಲಕ್ಷ್ಮೀನಾರಾಯಣ :
ಚಾರಿತ್ರಿಕ ದೃಕ್ಪಥಂಲೋ ವೀರಬ್ರಹ್ಮೇಂದ್ರಸ್ವಾಮಿ.

ಡಾ॥ ಎಂ. ಎಂ. ಪಡಶೆಟ್ಟಿ : ತಿಂಥಿಣಿ ಮೋನಯ್ಯ–ಒಂದು ಅಧ್ಯಯನ.

ಡಾ॥ ವೇದವ್ಯಾಸ : ೧೯೯೯ ಕಲಿಯುಗಾಂತಂ ಕಾಲಜ್ಞಾನಂ.


ಸಾಮಾಜಿಕ ಚಿಂತನ ಮಾಲೆ